ರಾಯಚೂರು, ಕೊಪ್ಪಳ, ಯಾದಗಿರಿ, ಕಲಬುರ್ಗಿ, ಬಳ್ಳಾರಿ, ವಿಜಯನಗರ, ಬೀದರ, ಏಕಕಾಲಕ್ಕೆ ಪ್ರಕಟಣೆ
Raichur, Koppal, Yadagiri, Kalburgi, Ballary, Vijaya Nagar, Bidar

# ಕನ್ನಡ ಮಾತೃ ಭೂಮಿ
ಕನ್ನಡ ದಿನ ಪತ್ರಿಕೆ

ರಾಯಚೂರಿನಿಂದ ರಾಜ್ಯದವರೆಗೆ

ಸಂಪಾದಕರು : ಶ್ಯಾಮ್ ಸುಂದರ್.ಎಲ್
EDITOR : SHYAM SUNDER L

KANNADA MATHRUBHOOMI
KANNADA DAILY PAPER

mathrubhoomircr@gmail.com
Call : 9886635117

ಸಂಪುಟ : Volume : 03 | ಸಂಚಿಕೆ Issuse : 178 | ದಿನಾಂಕ : 28-04-2026 Date : 28-04-2026 | ಮಂಗಳವಾರ Tuesday | RNI: Karkan/2023/89199 Post Reg No.: RCR/L/RNP/98/2025-2027 | ರಾಯಚೂರು Raichur | ಪುಟ : Pages : 04 | ರೂ Rs. 2

## ಮದುವೆಯಾಗುವುದಾಗಿ ನಂಬಿಸಿ ಯುವತಿಗೆ ಲೈಂಗಿಕ ದೌರ್ಜನ್ಯ ಆರೋಪ; ಯುವಕನ ವಿರುದ್ಧ ಪ್ರಕರಣ ದಾಖಲು

**ರಾಯಚೂರು,ಏ.27**-ಮದುವೆಯಾಗುವುದಾಗಿ ನಂಬಿಸಿ ಪ್ರೀತಿ, ಪ್ರೇಮ, ಪ್ರಣಯ ಎಂದು ಲೈಂಗಿಕ ದೌರ್ಜನ್ಯ ಎಸಗಿ, ಈಗ ವಿವಾಹವಾಗುವುದಕ್ಕೆ ನಿರಾಕರಿಸಿ ಯುವಕ ಜೀವ ಬೆದರಿಕೆ ಹಾಕಿದ್ದಾನೆ ಎಂದು ಆರೋಪಿಸಿ ಯುವತಿಯೊಬ್ಬರು ಲಿಂಗಸೂಗೂರು ಪೊಲೀಸ್ ಠಾಣೆಗೆ ದೂರು ನೀಡಿರುವ ಘಟನೆ ಜಿಲ್ಲೆಯಲ್ಲಿ ನಡೆದಿದೆ.

ಜಿಲ್ಲೆಯ ಲಿಂಗಸೂಗೂರಿನ ಬಸವೇಶ್ವರ ಕಾಲೇಜಿನಲ್ಲಿ ಬಿಎಸ್‌ಸಿ ಪ್ರಥಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ 19 ವರ್ಷದ ಯುವತಿ ದೂರು ನೀಡಿದ್ದಾಳೆ. ದೇವದುರ್ಗ ತಾಲೂಕಿನ ಶಾವಂತಗಲ್ ಗ್ರಾಮದ ಶಿವಕುಮಾರ್ (22) ಯುವತಿಗೆ ವಂಚಿಸಿರುವ ಆರೋಪಿ ಎಂದು ಪೊಲೀಸರು ತಿಳಿಸಿದ್ದಾರೆ.

ಯುವತಿ ತನ್ನ ತಾಯಿಯ ತವರು ಮನೆಗೆ ತೆರಳುತ್ತಿದ್ದ ಸಂದರ್ಭದಲ್ಲಿ ಆರೋಪಿಯ ಪರಿಚಯವಾಗಿತ್ತು. ➘ 4

## ಒಳ ಮೀಸಲಾತಿ ಬಳಿಕ ನೇಮಕಾತಿಗೆ ಹಾದಿ ಸುಗಮ: ಮಧು ಬಂಗಾರಪ್ಪ



**ಶಿವಮೊಗ್ಗ,ಏ.27**-ಶಿಕ್ಷಕರ ನೇಮಕಾತಿಯನ್ನು ನಾಲ್ಕೈದು ತಿಂಗಳಲ್ಲಿ ಮಾಡಲಾಗುವುದು ಎಂದು ಶಿಕ್ಷಣ ಸಚಿವ ಎಸ್. ಮಧು ಬಂಗಾರಪ್ಪ ಅವರು ತಿಳಿಸಿದರು.

ಇಂದು ಶಿವಮೊಗ್ಗದ ತಮ್ಮ ಕಚೇರಿಯಲ್ಲಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಒಳ್ ಮೀಸಲಾತಿ ಘೋಷಣೆಯಾದ ನಂತರ ಶುಕ್ರವಾರ ನೇಮಕಾತಿ ಕುರಿತು ಪ್ರಥಮ ಸಭೆ ನಡೆಸಲಾಗಿದೆ. ನಂತರ ಎರಡು ದಿನ ರಜೆ ಇತ್ತು. ಈಗ ಕೆಲಸದ ಮೊದಲ ದಿನವಾಗಿದೆ. ಒಳ ಮೀಸಲಾತಿ ಸಮಸ್ಯೆ ಬಗೆಹರಿದಿದೆ. ಶಿಕ್ಷಕರ ನೇಮಕಾತಿಯ ಸಿಇಟಿ ಆದಷ್ಟು ಬೇಗ ಮಾಡುತ್ತೇವೆ ಎಂದರು.


ಕಳೆದ ವರ್ಷ 6 ತಿಂಗಳ ಒಳಗೆಯೇ ಮಾಡಿ ಮುಗಿಸಬೇಕೆಂದುಕೊಂಡಿದ್ದೆವು. ಈಗ ಒಳ ಮೀಸಲಾತಿ ಮುಗಿದಿದೆ. ಇದನ್ನು ನಾಲ್ಕೈದು ತಿಂಗಳಲ್ಲಿ ಮಾಡಿ ಮುಗಿಸಬೇಕೆಂದು ತೀರ್ಮಾನಿಸಿದ್ದೇವೆ. ಜೂನ್‌ನಲ್ಲಿಯೇ ಶಿಕ್ಷಕರ ನೇಮಕ ಮಾಡಬೇಕು ಅಂದುಕೊಂಡಿದ್ವಿ. ನಂತರ ಜುಲೈನಲ್ಲಿ ಅಂದುಕೊಂಡಿದ್ದೆವು. ಎರಡು ಮೂರು ತಿಂಗಳಲ್ಲಿ ಮ್ಯಾಜಿಕ್ ಮಾಡಲು ಆಗಲ್ಲ, ಆದಷ್ಟು ಬೇಗ ಮಾಡಿ ಮುಗಿಸುತ್ತೇವೆಟಿ ಎಂದು ಹೇಳಿದರು.

ಯಾರು ಯಾರು ಓದಿಕೊಂಡಿದ್ದಾರೆ. ಅವರ ಕಷ್ಟ ನನಗೆ ಗೊತ್ತಿದೆ. ನನಗೂ ಕೂಡ ಅವಶ್ಯಕತೆ ಇದೆ. ನನ್ನ ಇಲಾಖೆಯಲ್ಲಿಯೇ ಅತಿ ಹೆಚ್ಚು ನೇಮಕಾತಿ ಮಾಡಿಕೊಡಬೇಕಿದೆ. ಕೆಲವರು ನಮ್ಮ ಬಳಿ ದುಡ್ಡಿಲ್ಲ ಅಂತ ಹೇಳಿದ್ದಾರೆ. ನಮ್ಮಲ್ಲಿ ದುಡ್ಡಿಲ್ಲ ಅನ್ನುವವರಿಗೆ ತಲೆಯಲ್ಲಿ ಬುದ್ಧಿಯೇ ಇಲ್ಲ ಎಂದು ಟೀಕಿಸಿದರು.

ಸರ್ಕಾರದಿಂದ್ ವಿವಿಧ ಹುದ್ದೆಗಳಿಗೆ ನೇಮಕಾತ್ ಮಾಡಿಕೊಳ್ಳಲು ಕೋರ್ಟನಲ್ಲಿ ವ್ಯಾಜ್ಯ ಇರುವುದರಿಂದ ನೇಮಕಾತಿ ತಡವಾಗುತ್ತಿದೆ. ರಾಜ್ಯದಲ್ಲಿ ಅತಿ ಹೆಚ್ಚು ನೇಮಕಾತಿ ಇರುವುದು ನಮ್ಮ್ ಇಲಾಖೆಯಲ್ಲಿ. ನಮ್ಮ್ ಇಲಾಖೆಯ ಟಿಇಟಿ ಪರೀಕ್ಷೆ ಮುಗಿದಿದೆ. ಈಗ ಸಿಇಟಿ ಪರೀಕ್ಷೆ ಆಗಬೇಕಿದೆ. ಈಗ ಒಳ ಮೀಸಲಾತಿ ➘ 4

### ಅಗ್ನಿಕುಂಡದಂತಾದ ಆದಿಲಾಬಾದ್

## 45.3 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲು ಬಿಸಿಲಿನ ಹೊಡೆತಕ್ಕೆ 6 ಮಂದಿ ಬಲಿ



**ತೆಲಂಗಾಣ,ಏ.27**-ಬಿಸಿಲಿನ ತಾಪಕ್ಕೆ ಆದಿಲಾಬಾದ್ ಜಿಲ್ಲೆ ಬೆಂಕಿಯ ಕುಲುಮೆಯಂತೆ ಉರಿಯುತ್ತಿದೆ. ಬೆಳಗ್ಗೆ 7 ಗಂಟೆಯಿಂದಲೇ ಪ್ರಾರಂಭವಾಗುವ ತೀವ್ರ ಶಾಖವು ಸಂಜೆ 7 ಗಂಟೆಯಾದರೂ ಕಡಿಮೆಯಾಗುವ ಲಕ್ಷಣ ಕಾಣುತ್ತಿಲ್ಲ. ಹಗಲಿನಲ್ಲಿ ರಸ್ತೆಗಳು ನಿರ್ಜನವಾಗುತ್ತಿವೆ.

ಕಳೆದ ಕೆಲವು ದಿನಗಳಿಂದ ತಾಪಮಾನ ಸಾಮಾನ್ಯಕ್ಕಿಂತ ಹೆಚ್ಚಾಗಿದ್ದು, ಭಾನುವಾರ 45.3 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ. ಇದು ಸಾಮಾನ್ಯಕ್ಕಿಂತ 3.5 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಿದೆ. ಇಲ್ಲಿಯವರೆಗೆ ಜಿಲ್ಲೆಯಲ್ಲಿ ಆರು ಜನರು ಬಿಸಿಲಿನ ಹೊಡೆತಕ್ಕೆ ಬಲಿಯಾಗಿದ್ದಾರೆ. ಹವಾಮಾನ ಇಲಾಖೆ (ಐಎಂಡಿ) ಹಲವೆಡೆ ಹೀಟ್ ವೇವ್ ದಾಖಲಾಗಿದೆ ಎಂದು ತಿಳಿಸಿದೆ.

ಸೋಮವಾರ ಮತ್ತು ಮಂಗಳವಾರ ತಾಪಮಾನ ಒಂದರಿಂದ ಎರಡು ಡಿಗ್ರಿ ಹೆಚ್ಚಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಸೋಮವಾರ ಉತ್ತರ ತೆಲಂಗಾಣ ಜಿಲ್ಲೆಗಳಲ್ಲಿ ಮತ್ತು ಮಂಗಳವಾರ ಉತ್ತರ ಮತ್ತು ದಕ್ಷಿಣ ಜಿಲ್ಲೆಗಳಲ್ಲಿ ಹಗುರದಿಂದ ಮಧ್ಯಮ ಮಳೆಯಾಗುವ ಸಾಧ್ಯತೆಯಿದೆ. 29 ರಂದು ಇಡೀ ರಾಜ್ಯದಲ್ಲಿ, 30 ರಂದು ಮಧ್ಯ ಮತ್ತು ದಕ್ಷಿಣ ತೆಲಂಗಾಣ ಜಿಲ್ಲೆಗಳಲ್ಲಿ ಮತ್ತು ಮುಂದಿನ ತಿಂಗಳ 1 ಮತ್ತು 2 ರಂದು ರಾಜ್ಯದಲ್ಲಿ ಗುಡುಗು ಮತ್ತು ಮಿಂಚಿನೊಂದಿಗೆ ಮಳೆಯಾಗುವ ಸೂಚನೆಗಳಿವೆ ಎಂದು ಐಎಂಡಿ ಮುನ್ಸೂಚನೆ ನೀಡಿದೆ. ➘ 4

## ಮೂಡಿಗೆರೆ: ಅಪಘಾತದಲ್ಲಿ ಗಾಯಗೊಂಡವರನ್ನು ತಮ್ಮ ಕಾರಲ್ಲೇ ಆಸ್ಪತ್ರೆಗೆ ದಾಖಲಿಸಿದ ಶಾಸಕಿ ನಯನಾ ಮೋಟಮ್ಮ



**ಚಿಕ್ಕಮಗಳೂರು,ಏ.27**-ಜಿಲ್ಲೆಯ ಮೂಡಿಗೆರೆ ತಾಲೂಕಿನ ನಿಡುವಾಳೆ ಬಳಿ ಸಂಭವಿಸಿದ ಭೀಕರ ಕಾರು ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಇಬ್ಬರು ಯುವಕರನ್ನು ತಮ್ಮ ಕಾರಿನಲ್ಲೇ ಆಸ್ಪತ್ರೆಗೆ ದಾಖಲಿಸಿ ಶಾಸಕಿ ನಯನಾ ಮೋಟಮ್ಮ ಮಾನವೀಯತೆ ಮೆರೆದಿದ್ದಾರೆ.

ಭಾನುವಾರ ನಿಯಂತ್ರಣ ತಪ್ಪಿದ ಕಾರೊಂದು ರಸ್ತೆ ಪಕ್ಕದ ಮರಕ್ಕೆ ವೇಗವಾಗಿ ಡಿಕ್ಕಿ ಹೊಡೆದ ಪರಿಣಾಮ ಈ ಅಪಘಾತ ಸಂಭವಿಸಿತ್ತು. ಡಿಕ್ಕಿಯ ತೀವ್ರತೆಗೆ ಕಾರಿನಲ್ಲಿದ್ದ ಇಬ್ಬರು ಯುವಕರು ತೀವ್ರ ರಕ್ತಸ್ರಾವಕ್ಕೊಳಗಾಗಿ ➘ 4

### ಜಿಲ್ಲಾಡಳಿತದಿಂದ ಎಸ್‌ಎಸ್‌ಎಲ್‌ಸಿ ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಸನ್ಮಾನ

## ಫಲಿತಾಂಶ ಹೆಚ್ಚಳಕ್ಕೆ ಮುಂದೆಯೂ ನಿರಂತರವಾಗಿ ಶ್ರಮಿಸಿ-ಡಿಸಿ ನಿತೀಶ

■ ಕನ್ನಡ ಮಾತೃ ಭೂಮಿ ವಾರ್ತೆ



**ರಾಯಚೂರು,ಏ.27**- ಎಸ್‌ಎಸ್‌ಎಲ್‌ಸಿ ಫಲಿತಾಂಶ ವಿದ್ಯಾರ್ಥಿ ಜೀವನದ ಬಹುದೊಡ್ಡ ತಿರುವಾಗಿದ್ದು, ಆದ್ದರಿಂದ ವಿದ್ಯಾರ್ಥಿಗಳು ನಿರಂತರವಾಗಿ ಅಭ್ಯಾಸ ಮಾಡಬೇಕು ಮತ್ತು ಶಿಕ್ಷಕರು ಮತ್ತು ಶಿಕ್ಷಣ ಇಲಾಖೆ ಜಿಲ್ಲೆಯಲ್ಲಿ ಉತ್ತಮ ಫಲಿತಾಂಶ ತರಲು ನಿರಂತರವಾಗಿ ಶ್ರಮಿಸಬೇಕು ಎಂದು ಜಿಲ್ಲಾಧಿಕಾರಿ ಕೆ.ನಿತೀಶ ಹೇಳಿದರು.

ಅವರಿಂದು ನಗರದ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದು ಐದು ಜನ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದರು.

ಎಸ್‌ಎಸ್‌ಎಲ್‌ಸಿ ಫಲಿತಾಂಶವನ್ನು ಹೆಚ್ಚಿಸಲು ಜಿಲ್ಲೆಯ ಜಿಲ್ಲಾ ಮಟ್ಟದಿಂದ ಗ್ರಾಮೀಣ ಮಟ್ಟದವರೆಗೂ ವಿಶೇಷವಾದ ತಂಡಗಳನ್ನು ರಚಿಸಲಾಗಿತ್ತು. ಜೊತೆಗೆ ಪ್ರತಿ ತಾಲೂಕಿಗೆ ನೋಡೆಲ್ ಅಧಿಕಾರಿಗಳನ್ನು ನೇಮಕ ಮಾಡಿ, ಅಭ್ಯಾಸದಲ್ಲಿ ಹಿಂದುಳಿದ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ, ಅವರಿಗೆ ವಿಶೇಷವಾದ ಕಲಿಕಾ ಚಟುವಟಿಕೆಗಳನ್ನು ನಡೆಸಿ, ಜಿಲ್ಲೆಯ ಫಲಿತಾಂಶವನ್ನು ಸುಧಾರಿಸಲಾಗಿದೆ. ಮತ್ತು ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳನ್ನು ಉತ್ತೀಣಗೊಳಿಸುವ ನಿಟ್ಟಿನಲ್ಲಿ ಶಿಕ್ಷಕರು, ಶಿಕ್ಷಣ ಇಲಾಖೆಯ ಅಧಿಕಾರಿಗಳು ಅತ್ಯಂತ ಹೆಚ್ಚಿನ ಶ್ರಮ ವಹಿಸಿ ಕಾರ್ಯ ನಿರ್ವಹಿಸಿದ್ದಾರೆ ಎಂದರು.

ರಾಜ್ಯಕ್ಕೆ 21ನೇ ಸ್ಥಾನದಲ್ಲಿದ್ದೇವೆ ಎಂದು ನಮ್ಮನ್ನು ನಾವು ಬೆನ್ನು ತಟ್ಟಿಕೊಳ್ಳದೇ, ಜಿಲ್ಲೆಯ ಶೈಕ್ಷಣಿಕ ಪರಿಸ್ಥಿತಿಯನ್ನು ಸುಧಾರಿಸಲು ಇಂದಿನಿಂದಲೇ ರೂಪು ರೇಷೆಗಳನ್ನು

## ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭದ್ರತಾ ಲೋಪ ಪ್ರಕರಣಕ್ಕೆ ಟ್ವಿಸ್ಟ್: ಸಂಸ್ಥೆಯ ಮೇಲಿನ ಕೋಪಕ್ಕೆ ಸಿಬ್ಬಂದಿಗಳಿಂದಲೇ ಕೃತ್ಯ

**ಬೆಂಗಳೂರು,ಏ.27**-ಐಪಿಎಲ್ ಪಂದ್ಯಗಳ ವೇಳೆ ಭದ್ರತೆ ನಿರ್ವಹಣೆಗಾಗಿ ಎಂ.ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾಗಳ ಸಂಪರ್ಕ ಕಡಿತಗೊಳಿಸುವ ಮೂಲಕ ಆತಂಕ ಸೃಷ್ಟಿಸಿದ್ದ ಇಬ್ಬರು ಆರೋಪಿಗಳನ್ನ ಕಬ್ಬನ್ ಪಾರ್ಕ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸಿಸಿಟಿವಿ ಕ್ಯಾಮೆರಾಗಳ ನಿರ್ವಹಣೆಯ ಜವಾಬ್ದಾರಿ ವಹಿಸಿಕೊಂಡಿದ್ದ ಉಪವಿತರಕ ಸಂಸ್ಥೆಯ ಸಿಬ್ಬಂದಿಗಳಾದ ಮಂಜುನಾಥ್.ಇ ಹಾಗೂ ಅಬ್ದುಲ್ ಕಲಾಂ ಬಂಧಿತರು. ಆರೋಪಿಗಳನ್ನ ವಿಚಾರಣೆಗೊಳಪಡಿಸಿದಾಗ ಕೃತ್ಯದ ಹಿಂದೆ ತೀರಾ ವೈಯಕ್ತಿಕ ಹಾಗೂ ವಿಚಿತ್ರ ➘ 4

## ಭೀಕರ ರಸ್ತೆ ಅಪಘಾತ: ಇಬ್ಬರು ಸಾವು, ಇಬ್ಬರಿಗೆ ಗಂಭೀರ ಗಾಯ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.27**-ಜಾತ್ರೆಗೆ ತೆರಳಿದ್ದವರು ಮನೆಗೆ ವಾಪಸ್ ಆಗುವ ಮಾರ್ಗದಲ್ಲಿ ದುರಂತಕ್ಕೀಡಾದ ಘಟನೆ ಸಿರವಾರ ತಾಲೂಕಿನ ಶಾಖಾಪುರ ಮುಖ್ಯರಸ್ತೆಯಲ್ಲಿ ನಡೆದಿದೆ.

ಅತ್ತನೂರು ದಿಡ್ಡಿ ಬಸವೇಶ್ವರ ಜಾತ್ರೆಯಿಂದ ಹಿಂದಿರುಗುತ್ತಿದ್ದ ವೇಳೆ ನಾಲ್ವರು ಪ್ರಯಾಣಿಸುತ್ತಿದ್ದ ಬೈಕ್‌ಗೆ ಟಿಪ್ಪರ್ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಸಾವನ್ನಪ್ಪಿ, ಮತ್ತಿಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಮೃತರು ಹಾಗೂ ಗಾಯಾಳುಗಳು ನಿನ್ನೆ ಸಂಜೆ ಅತ್ತನೂರು ದಿಡ್ಡಿ ಬಸವೇಶ್ವರ ಜಾತ್ರೆಗೆ ತೆರಳಿದ್ದರು. ಜಾತ್ರೆಯ ರಥೋತ್ಸವ ಮುಗಿಸಿಕೊಂಡು ರಾತ್ರಿ ಒಂದೇ ಬೈಕ್‌ನಲ್ಲಿ ಶಾಖಾಪುರದತ್ತ ಪ್ರಯಾಣಿಸುತ್ತಿದ್ದ ವೇಳೆ, ಸಿರವಾರ ತಾಲೂಕಿನ ಶಾಖಾಪುರ ಮುಖ್ಯರಸ್ತೆಯಲ್ಲಿ ಈ ಅಪಘಾತ ಸಂಭವಿಸಿದೆ. ವೇಗವಾಗಿ ಬಂದ ಟಿಪ್ಪರ್ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ದುರಂತ ಉಂಟಾಗಿದೆ.

ಡಿಕ್ಕಿಯ ರಭಸಕ್ಕೆ ಮೃತರ ದೇಹಗಳು ನಜ್ಜುಗುಜ್ಜಾಗಿದ್ದು, ಘಟನೆ ಸ್ಥಳದಲ್ಲೇ ಇಬ್ಬರು ಮೃತಪಟ್ಟಿರದ್ದಾರೆ. ಬೈಕ್ ಓಡಿಸುತ್ತಿದ್ದ 37 ವರ್ಷದ ಅಂಜಿನಯ್ಯ ನಾಯಕ ಹಾಗೂ 10 ವರ್ಷದ ಬಾಲಕಿ ಅರ್ಚನಾ ಎಂದು ಗುರುತಿಸಲಾಗಿದೆ. ➘ 4

### ಒಳಮೀಸಲಾತಿಯಲ್ಲಿ ಮಾದಿಗ ಸಮುದಾಯಕ್ಕೆ ಅನ್ಯಾಯ, ಕುರ್ಚಿ ಉಳಿಸಿಕೊಳ್ಳಲು

## ಸಿದ್ದರಾಮಯ್ಯರಿಂದ ಸ್ವಾರ್ಥ ರಾಜಕಾರಣ-ನರಸಪ್ಪ ದಂಡೋರ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.27**- ಒಳಮೀಸಲಾತಿ ಜಾರಿ ವಿಚಾರದಲ್ಲಿ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಬಲಾಢ್ಯ ಸಚಿವರ ಒತ್ತಡಕ್ಕೆ ಮಣಿದು, ತಮ್ಮ ಕುರ್ಚಿ ಉಳಿಸಿಕೊಳ್ಳಲು, ತಮ್ಮ ಸ್ವಾರ್ಥಕ್ಕಾಗಿ ಇಡೀ ಮಾದಿಗ ಸಮುದಾಯಕ್ಕೆ ಅನ್ಯಾಯ ಮಾಡಿದ್ದಾರೆ ಎಂದು ಮಾದಿಗ ದಂಡೋರ, ಮಾದಿಗ ಮೀಸಲಾತಿ ಹೋರಾಟ ಸಮಿತಿಯ ರಾಜ್ಯಾಧ್ಯಕ್ಷ ನರಸಪ್ಪ ದಂಡೋರ ಹೇಳಿದರು.

ಅವರಿಂದು ಮಾಧ್ಯಮಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ಇತ್ತೀಚೆಗೆ ರಾಜ್ಯ ಸರ್ಕಾರ ಒಳ ಮೀಸಲಾತಿಯನ್ನು ಶೇ.5.25, ಶೇ.5.25 ಹಾಗೂ ಶೆ.4.50 ಯಾಗಿ ಜಾರಿ ಮಾಡಿದ್ದು, ಮಾದಿಗ ಸಮುದಾ ಯಕ್ಕೆ ಪ್ರತ್ಯೇಕ ಶೇ.6ರಷ್ಟು ಮೀಸಲಾತಿ ನೀಡುವಂತೆ ಸದಾ ಶಿವ ಆಯೋಗ, ನಾಗಮೋಹನದಾಸ ಆಯೋಗ ತಿಳಿಸಿದರೂ. ಅವುಗಳನ್ನು ಪರಿಗಣಿಸದೇ, ರಾಜ್ಯದಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳಲು, ಮತ್ತು ಕುರ್ಚಿ ಉಳಿಸಿಕೊಳ್ಳಲು ತಮ್ಮ ಇಚ್ಚೆಯಂತೆ ಜಾರಿ ಮಾಡಿದ್ದಾರೆ ಎಂದರು. ➘ 4

## ಏ.29ಕ್ಕೆ ಮದುವೆ: ಸಾಧಕರಿಗೆ ಸನ್ಮಾನ-ಭರತ್



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.27**-ವಿವಿಧ ಕ್ಷೇತ್ರದಲ್ಲಿ ಸಮಾಜಮುಖಿ ಕಾರ್ಯ ಮಾಡುತ್ತಿರುವ ಜಿಲ್ಲೆಯ 20 ಜನರಿಗೆ ಮದುವೆ ಸಮಾರಂಭದಲ್ಲಿ ಸನ್ಮಾನಿಸಿ ಗೌರವಿಸಲಾಗುತ್ತದೆ ಎಂದು ಚಿಕ್ಕಸುಗೂರು ಗ್ರಾಮದ ಯುವಕ ಭರತ್ ಸಾಗರ ಹೇಳಿದರು.

ಅವರಿಂದು ಮಾಧ್ಯಮಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ಏ.29ರಂದು ಚಿಕ್ಕಸುಗೂರು ಗ್ರಾಮದ ಆಂಜನೇಯ್ಯ ದೇವಸ್ಥಾನದಲ್ಲಿ ನನ್ನ ವಿವಾಹವಿದ್ದು, ಮದುವೆಯನ್ನು ವಿಶೇಷವಾಗಿ ಮಾಡಿಕೊಳ್ಳಲು ಇಚ್ಚಿಸಿದ್ದು, ಸಮಾಜದಲ್ಲಿ ಒಳ್ಳೆಯ ಕಾರ್ಯವನ್ನು ಮಾಡುತ್ತಿರುವ ಜಿಲ್ಲೆಯ 20 ಜನ ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಾಗಿ ಹೇಳಿದರು.

ದುಶ್ಚಟಗಳನ್ನು ಬಿಡಿಸಲು ಜಾಗೃತಿ ಮೂಡಿಸುತ್ತಿರುವ ಗುರುಗಳು, ರೈತರ ಸಮಸ್ಯೆಗಳಿಗಾಗಿ ಹೋರಾಡುವ ರೈತ ನಾಯಕರು, ಸೈನಿಕರು, ಶಿಕ್ಷಣ ಕ್ಷೇತ್ರಕ್ಕೆ ತಮ್ಮದೇ ಕೊಡುಗೆಯನ್ನು ನೀಡಿದ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು, ಶಿಕ್ಷಕರು, ಜನಪ್ರತಿನಿದಿಗಳು, ಖಾಸಗಿ ಕಂಪನಿಗಳಲ್ಲಿ ಕಾರ್ಮಿಕರಿಗೆ ಉತ್ತಮ ಸೌಲಭ್ಯಗಳನ್ನು ಮತ್ತು ಸೇವಾ ಭದ್ರತೆಯನ್ನು ನೀಡುವ ಕಂಪನಿಯ ಮಾಲಿಕರು ಸೇರಿದಂತೆ ವಿವಿಧ ಕ್ಷೇತ್ರದಲ್ಲಿ ತಮ್ಮದೇ ಆದ ಕೊಡುಗೆಯನ್ನು ನೀಡಿರುವ ಹಲವು ಸಾಧಕರಿಗೆ ಸನ್ಮಾನಿಸಿ ಗೌರವಿಸಲಾಗುತ್ತದೆ ಎಂದರು.

ಮದುವೆ ಎಂದರೆ ಕೇವಲ ಕುಟುಂಬದ ಸಮಾರಂಭವಾ ಗದೇ, ಸಮಾಜಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ ಸಾಧಕರಿಗೆ ಸನ್ಮಾನಿಸಿ ಅವರ ಸಮಾರಂಭವಾಗಬೇಕೆನ್ನುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಮತ್ತು ಸಮಾಜಕ್ಕೆ ಈ ಸಾಧಕರನ್ನು ಪರಿಚಯಿಸುವ ಉದ್ದೇಶವೂ ಇದೆ ಎಂದು ತಿಳಿಸಿದರು.

## ಗೋವಂಶಕ್ಕೆ ರಾಷ್ಟ್ರ ಮಟ್ಟದ ಸ್ಥಾನಮಾನ ನೀಡಲು ಮನವಿ




■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.27**-ಗೋವಂಶಕ್ಕೆ ''ರಾಷ್ಟ್ರಮಾತೆ, ರಾಷ್ಟ್ರ ಆರಾಧ್ಯ ಎಂಬ ಸಾಂವಿಧಾನಿಕ ಸ್ಥಾನಮಾನ ನೀಡಬೇಕು ಎಂದು ರಾಷ್ಟ್ರೀಯ ಗೋ ರಕ್ಷಕ ಸೇವಾ ಸಂಘ ಹಾಗೂ ಅಖಿಲ ಭಾರತ ಕ್ಷೇತ್ರೀಯ ಮಹಾಸಭಾ ಟ್ರಸ್ಟ್ ವತಿಯಿಂದ ಗ್ರೇಡ್-2 ತಹಶಿಲ್ದಾರ್ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಗಿದೆ.

ಕೇಂದ್ರ ಮಟ್ಟದಲ್ಲಿ ಗೋಸೇವಾ ಸಚಿವಾಲಯವನ್ನು ಸ್ಥಾಪಿಸಿ, ಗೋವಂಶ ರಕ್ಷಣೆಗೆ ಏಕೀಕೃತ ಕೇಂದ್ರ ಕಾನೂನು ರೂಪಿಸಬೇಕು, ಗ್ರಾಮೀಣ ಆರ್ಥಿಕತೆ ಹಾಗೂ ಸಾಂಸ್ಕೃತಿಕ ಪರಂಪರೆಯ ಆಧಾರವಾದ ದೇಶೀಯ ಗೋವಂಶಕ್ಕೆ ಸೂಕ್ತ ರಕ್ಷಣೆಯ ಅಗತ್ಯವಿದೆ ಎಂದು ಮನವಿ ಮಾಡಿದರು. ➘ 4

## ಸಿಎಚ್ ಪೌಡರ್ ಮಿಶ್ರಿತ ಸೇಂದಿ ಮಾರಾಟ: ದಾಳಿ

■ ಕನ್ನಡ ಮಾತೃ ಭೂಮಿ ವಾರ್ತೆ



**ರಾಯಚೂರು,ಏ.27**-ನಗರದಲ್ಲಿ ಅಕ್ರಮವಾಗಿ ಸಿಎಚ್ ಪೌಡರ್ ಮಿಶ್ರಿತ ಸೇಂದಿ ಮಾರಾಟ ನಡೆಸುತ್ತಿದ್ದ ಜಾಲದ ಮೇಲೆ ಅಬಕಾರಿ ಮತ್ತು ಪೊಲೀಸ್ ಇಲಾಖೆ ದಾಳಿ ನಡೆಸಿ, ಭಾರೀ ಪ್ರಮಾಣದ ಅಕ್ರಮ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ.

ನಗರದ ಚಂದ್ರಬಂಡಾ ರಸ್ತೆಯಲ್ಲಿರುವ ನರಸಿಂಹಲು ಅಲಿಯಾಸ್ ಬ್ರೂಸ್‌ಲೀ ಅವರ ಮನೆಯಲ್ಲಿ ದಾಳಿ ನಡೆಸಿದ ಅಧಿಕಾರಿಗಳು, ಸುಮಾರು 1000 ಲೀಟರ್‌ಗೂ ಅಧಿಕ ಸೇಂದಿ, ಸಿಎಚ್ ಪೌಡರ್ ಹಾಗೂ ಅಲ್ಪಾಜೋಲಂ ಸೇರಿದಂತೆ ವಿವಿಧ ರಾಸಾಯನಿಕ ಪದಾರ್ಥಗಳನ್ನು ವಶಪಡಿಸಿಕೊಂಡಿದ್ದಾರೆ.

ಆರೋಪಿ ನರಸಿಂಹಲು ವಿರುದ್ಧ ಈಗಾಗಲೇ 40ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿದ್ದು, ಈ ಹಿಂದೆ ಗೂಂಡಾ ಕಾಯ್ದೆಯಡಿ ಜೈಲು ಶಿಕ್ಷೆಯನ್ನೂ ಅನುಭವಿಸಿದ್ದಾನೆ. ಆದಾಗ್ಯೂ, ಮತ್ತೆ ಇದೇ ಅಕ್ರಮ ಚಟುವಟಿಕೆಯಲ್ಲಿ ತೊಡಗಿಕೊಂಡಿರುವುದಾಗಿ ಖಚಿತ ಮಾಹಿತಿಯ ಆಧಾರದ ಮೇಲೆ ಅಧಿಕಾರಿಗಳು ದಾಳಿ ನಡೆಸಿದ್ದಾರೆ ಎಂದು ತಿಳಿದು ಬಂದಿದೆ.

ದಾಳಿ ವೇಳೆ ನರಸಿಂಹಲು ಸೇರಿದಂತೆ ಮಹೇಶ್ ಮತ್ತು ರಮೇಶ್ ಸ್ಥಳದಿಂದ ಪರಾರಿಯಾಗಿದ್ದು, ಆರೋಪಿಗಳ ಬಂಧನಕ್ಕಾಗಿ ಪೊಲೀಸರು ವ್ಯಾಪಕ ಶೋಧ ಕಾರ್ಯಾಚರಣೆ ನಡೆಸುತ್ತಿದ್ದಾರೆ.ಈ ಘಟನೆ ನಗರದ ಮಾರ್ಕೆಟ್ ಯಾರ್ಡ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮುಂದಿನ ತನಿಖೆ ಮುಂದುವರಿಸಿದ್ದಾರೆ.

# ಸ್ಮಶಾನಕ್ಕೆ ಭೂಸ್ವಾಧೀನ ಪರಿಹಾರ ನೀಡದ ಜಿಲ್ಲಾಡಳಿತ ಧಾರವಾಡ ಎಸಿ ಕಚೇರಿ ಪೀಠೋಪಕರಣ ಜಪ್ತಿ

■ ಕನ್ನಡ ಮಾತೃ ಭೂಮಿ ವಾರ್ತೆ



**ಧಾರವಾಡ,ಏ.27-**ಸ್ಮಶಾನಕ್ಕೆ ಸ್ವಾ ಧೀನಪಡಿಸಿಕೊಂಡ ಜಮೀನಿಗೆ ಪರಿಹಾರ ನೀಡದ ಹಿನ್ನೆಲೆಯಲ್ಲಿ ಧಾರವಾಡದ ಉಪವಿಭಾಗಾಧಿಕಾರಿ ಕಚೇರಿಯ ಪೀಠೋ ಪಕರಣಗಳನ್ನು ಜಪ್ತಿ ಮಾಡಲಾಯಿತು. ಧಾರವಾ ಡದ 2ನೇ ಅಧಿಕ ದಿವಾಣಿ ನ್ಯಾಯಾ ಲಯದ ಆದೇಶದ ಹಿನ್ನೆಲೆಯಲ್ಲಿ ಕೋರ್ಟ್ ಸಿಬ್ಬಂದಿ ಜಪ್ತಿ ಮಾಡಿದರು.

ಜಿಲ್ಲೆಯ ನವಲಗುಂದ ತಾಲೂ ಕಿನ ಕೊಂಡಿಕೊಪ್ಪ ಗ್ರಾಮದ ನಾಗನಗೌಡ ಪಾಟೀಲ್ ಎಂಬನುವರಿಗೆ ಸೇರಿದ 2 ಎಕರೆ ಕೃಷಿ ಜಮೀನನ್ನು ಎಪ್ರಿಲ್ 8, 2010 ರಲ್ಲಿ ಭೂಸ್ವಾಧೀನಪಡಿಸಿಕೊಳ್ಳಲಾಗಿತ್ತು. ಗ್ರಾಮದಲ್ಲಿ ಖಾಸಗಿ ಜಮೀನಿನಲ್ಲಿ ಅಂತ್ಯಕ್ರಿಯೆ ಮಾಡಲಾಗುತ್ತಿದ್ದರಿಂದಾಗಿ ಸ್ಮಶಾನದ ಉದ್ದೇಶಕ್ಕಾಗಿ ಈ ಭೂಮಿಯ ನ್ನು ಸ್ವಾಧೀನ ಮಾಡಿಕೊಳ್ಳಲಾಗಿತ್ತು.

ಪ್ರತಿ ಗುಂಟೆಗೆ ₹10,500 ರಂತೆ ಸ್ವಾಧೀನ ಮಾಡಿಕೊಂಡು ಒಟ್ಟು ₹35 ಲಕ್ಷ ಪರಿಹಾರ ನೀಡಬೇಕಿತ್ತು. ಆದರೆ, ಜಿಲ್ಲಾಡಳಿತ ₹ 20 ಲಕ್ಷ ನೀಡಿದ್ದು, ಇನ್ನೂ ₹15 ಲಕ್ಷ ಬಾಕಿ ಉಳಿಸಿಕೊಂಡಿರುವ ಹಿನ್ನೆಲೆಯಲ್ಲಿ ರೈತ ಕೋರ್ಟ್ ಮೊರೆ ಹೋಗಿದ್ದರು. ಈ ಹಿನ್ನೆಲೆಯಲ್ಲಿ ನ್ಯಾಯಾಲಯ ಕಚೇರಿ ಜಪ್ತಿಗೆ ಆದೇಶಿಸಿತ್ತು.

11,80,000 ಪೇಮೆಂಟ್ ಆಗಿದೆ : ಈ ಕುರಿತು ರೈತನ ಸಹೋದರ ಭೀಮನಗೌಡ ಅವರು ಮಾತನಾಡಿದ್ದು, ಸ್ಮಶಾನಕ್ಕೆ ಜಾಗ ಇರಲಿಲ್ಲ. ಖಾಸಗಿ ಜಮೀನಿನಲ್ಲಿ ಅಂತ್ಯಕ್ರಿಯೆ ಮಾಡುತ್ತಿದ್ದರು. ಹೀಗಾಗಿ, ತಹಶೀಲ್ದಾರ್ ಅವರು ನಮಗೆ ಭೂಮಿ ಕೊಡಿ ಎಂದರು. ಹೀಗಾಗಿ, ನಮ್ಮ ಜಮೀನನ್ನು ಸರ್ಕಾರಕ್ಕೆ ಬಿಟ್ಟು ಕೊಟ್ಟೆವು. ಅದರ ಪ್ರಕಾರ ಭೂಸ್ವಾಧೀನ ಆಯ್ತು. ಅದರ ಹಣ ಕೊಟ್ಟರು. ನಂತರ ನಾವು ಕೋರ್ಟ್‌ಗೆ ಹೋದೆವು. ಜಿಲ್ಲಾಡಳಿತದಿಂದ ₹15 ಲಕ್ಷ ಬಾಕಿ ಉಳಿದಿದ್ದರಿಂದಾಗಿ ಮತ್ತೊಮ್ಮೆ ಕೋರ್ಟ್ ಮೊರೆ ಹೋಗಿ ಸ್ಟೇ ತಂದಿದ್ದಾರೆ. ಆದರೂ ನಮಗೆ ಸಿಗಲಿಲ್ಲ. ನಂತರ ಪರಿಹಾರ ಕೊಡುವುದಕ್ಕೆ ಸತಾಯಿಸಿದ್ದರು. 11,80,000 ಪೇಮೆಂಟ್ ಆಗಿದೆ. 15,00,000 ಲಕ್ಷ ಕೊಡಬೇಕಾಗಿತ್ತು. ಬ್ಯಾಲೆನ್ಸ್ ಕೊಟ್ಟಿಲ್ಲದಿರುವುದರಿಂದಾಗಿ ಕೋರ್ಟ್‌ನಿಂದ ವಾರಂಟ್ ಜಾರಿಯಾಗಿದ್ದರಿಂದಾಗಿ ಜಪ್ತಿ ಮಾಡಿದ್ದಾರೆ ಎಂದು ಹೇಳಿದರು.

15 ಲಕ್ಷ ಇನ್ನೂ ಬಾಕಿ ಉಳಿದಿದೆ : ಈ ಕುರಿತು ವಕೀಲರಾದ ಶಿವಾನಿ ಪಾಟೀಲ ಅವರು ಮಾತನಾಡಿ, ಟಭೂಸ್ವಾಧೀನಪಡಿಸಿಕೊಂಡಿದ್ದ ಜಮೀನಿಗೆ ಪರಿಹಾರವಾಗಿ 35 ಲಕ್ಷ ಹಣ ನೀಡಬೇಕಿತ್ತು. ಅದರಲ್ಲಿ 20 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಉಳಿದ 15 ಲಕ್ಷ ಇನ್ನೂ ಬಾಕಿ ಉಳಿದಿದೆ. ಈ ಬಗ್ಗೆ ನಾವು ಹಲವು ಬಾರಿ ಆಫೀಸ್‌ಗೆ ಬಂದು ಕೇಳಿದ್ವಿ. ಆದರೆ, ಕೊಟ್ಟಿಲ್ಲ. ಹೀಗಾಗಿ, ಇಂದು ನಾವು ನಾಲ್ಕು ಚೇರ್ ಹಾಗೂ ಒಂದು ಕಂಪ್ಯೂಟರ್‌ನ್ನು ಜಪ್ತಿ ಮಾಡಿಕೊಂಡಿದ್ದೇವೆಟ ಎಂದು ತಿಳಿಸಿದರು.

# ಹರಿಹರ ಪಂಚಮಸಾಲಿ ಮಠದಲ್ಲಿ ಲೆಕ್ಕಕೊಡುವ ಕಾರ್ಯಕ್ರಮ ಗದ್ದಲ, ಪರ-ವಿರೋಧ ಘೋಷಣೆ-ಪೊಲೀಸರ ಮಧ್ಯಪ್ರವೇಶ

**ದಾವಣಗೆರೆ,ಏ.27-**ಹರಿಹರ ಪಂಚಮ ಸಾಲಿ ಮಠದಲ್ಲಿಂದು ಮಠದ ಟ್ರಸ್ಟಿಗಳು ಲೆಕ್ಕ ಕೊಡುವ ಕಾರ್ಯಕ್ರಮ ಹಮ್ಮಿಕೊಂ ಡಿದ್ದಾರೆ. ಈ ಸಂದರ್ಭದಲ್ಲಿ ವಚನಾನಂದ ಸ್ವಾಮೀಜಿ ಹಾಗು ಟ್ರಸ್ಟಿಗಳ ಕಡೆಯ ಎರಡು ಗುಂಪುಗಳ ನಡುವೆ ಮಠದಲ್ಲಿ ದೊಡ್ಡ ಹೈಡ್ರಾಮಾವೇ ನಡೆದಿದೆ.





ಲೆಕ್ಕಕೊಡುವ ಕಾರ್ಯಕ್ರಮಕ್ಕೆ ತೆರಳುವ ಮುನ್ನ ಟ್ರಸ್ಟಿಗಳು ಮಹಾಂತ ಸ್ವಾಮೀಜಿಯವರ ಗದ್ದುಗೆಗೆ ತೆರಳಿ ಅವರ ಪುತ್ಥಳಿಗೆ ಹೂಮಾಲೆ ಅರ್ಪಿಸಿದರು. ಈ ವೇಳೆ ಟ್ರಸ್ಟಿಗಳ ಕಾರ್ಯಕ್ರಮಕ್ಕೆ ತೆರಳುವಾಗ ಟ್ರಸ್ಟಿಗಳ ವಿರುದ್ಧ ಸ್ವಾಮೀಜಿಯ ಕಡೆಯ ಭಕ್ತರ ಗುಂಪು ಘೋಷಣೆ ಹಾಕಿತು. ಇದನ್ನು ಸಹಿಸಿಕೊಳ್ಳದ ಟ್ರಸ್ಟಿಗಳ ಕಡೆಯ ಗುಂಪು ಕೂಡ ಸ್ವಾಮೀಜಿ ವಿರುದ್ಧ ಘೋಷಣೆ ಕೂಗಿದರು. ಆಗ ಸ್ವಾಮೀಜಿ ಕಡೆಯ ಗುಂಪು ಹಾಗೂ ಟ್ರಸ್ಟಿಗಳ ಕಡೆಯ ಗುಂಪುಗಳ ನಡುವೆ ನೂಕಾಟ ತಳ್ಳಾಟ ಆಯಿತು. ಈ ವೇಳೆ, ವಚನಾನಂದ ಸ್ವಾಮೀಜಿ ಅವರು ಮೌನವಾಗಿ ಕೂತು ನೋಡುತ್ತಿದ್ದರು. ಸ್ವಾಮೀಜಿ ಪರ ಇರುವ ಗುಂಪು ಟ್ರಸ್ಟಿಗಳು ಕಳ್ಳರು ಎಂದು ಘೋಷಣೆ ಕೂಗಿದರೆ, ಟ್ರಸ್ಟಿಗಳ ಕಡೆಯ ಗುಂಪು ಕಳ್ಳ ಸ್ವಾಮೀಜಿ ಎಂದು ಘೋಷಣೆ ಹಾಕಿತು. ಆಗ ಎರಡು ಗುಂಪುಗಳ ಮಧ್ಯೆ ಪೊಲೀಸರು ಮಧ್ಯ ಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದರು. ಈ ಸಂದರ್ಭದಲ್ಲಿ ರಾಣೇಬೆನ್ನೂರು ಮಾಜಿ ಶಾಸಕ ಅರುಣ್ ಕುಮಾರ್ ಪೂಜಾರ್ ಸ್ಥಳದಲ್ಲಿದ್ದರು. ಟ್ರಸ್ಟಿಗಳಾದ ಬಿ.ಸಿ. ಉಮಾಪತಿ, ಹೆಚ್.ಎಸ್. ನಾಗರಾಜ್, ಚಂದ್ರಶೇಖರ್ ಪೂಜಾರ್, ಭಾವಿ ಬೆಟ್ಟಪ್ಪ ಇತರರು ಇದ್ದರು. ಈ ವೇಳೆ ಟ್ರಸ್ಟಿಗಳು ಮಾತನಾಡದೆ ಕಾರ್ಯಕ್ರಮದತ್ತ ನಡೆದರು. ಮುಂಜಾಗ್ರತಾ ಕ್ರಮವಾಗಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ವಿಡಿಯೋ ವೈರಲ್: ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದ ಅಧ್ಯಕ್ಷ ಸೋಮನಗೌಡ ಮಾಲಿಪಾಟೀಲ್ ಅವರು ವಚನಾನಂದ ಸ್ವಾಮೀಜಿ ವಿರುದ್ಧ ಮಾತನಾಡಿದ್ದಾರೆ ಎನ್ನಲಾದ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಲಿಂಗಾಯತ ಪಂಚಮಸಾಲಿ ಸಂಘದ ಪದಾಧಿಕಾರಿಗಳ ಜೊತೆ ಕುಳಿತು ಮಾತನಾಡಿದ ವಿಡಿಯೋ ಇದಾಗಿದೆ. ವಚನಾನಂದ ಸ್ವಾಮೀಜಿ ನನಗೆ ಪರಿಚಯ ಇರಲಿಲ್ಲ, ವಚನಾನಂದ ಶ್ರೀಗಳನ್ನು ಕಿಚಡಿ ಕೊಟ್ರೇಶ್ ಪರಿಚಯ ಮಾಡಿಸಿದ. ಅಪ್ಪಾಜಿ ಅಪ್ಪಾಜಿ ಅಂತಾ ಹೇಳಿ ಬಿ.ಸಿ. ಉಮಾಪತಿಗೆ ಮೋಸ ಮಾಡಿದರು ಎಂದು ಸೋಮನಗೌಡ ಮಾಲಿಪಾಟೀಲ್ ಹೇಳಿರುವುದು ವಿಡಿಯೋದಲ್ಲಿದೆ. ವಚನಾನಂದ ಶ್ರೀಗಳ ಉಚ್ಚಾಟನೆ ಬಳಿಕ ಎಲ್ಲಿಯೂ ಕಾಣಿಸಿಕೊಳ್ಳದ ಸೋಮನಗೌಡ ಮಾಲಿ ಪಾಟೀಲ್ ಕಳೆದ ದಿನ ದಿಢೀರ್ ಆಗಿ ಕಳೆದ ದಿನ ಮಾಧ್ಯಮಗೋಷ್ಟಿ ನಡೆಸಿ, ಮೂವರು ಟ್ರಸ್ಟಿಗಳನ್ನು ಉಚ್ಚಾಟನೆ ಮಾಡಿದ್ದಾಗಿ ಘೋಷಿಸಿದ್ದರು. ಈ ಬೆನ್ನಲ್ಲೇ ವಿಡಿಯೋ ವೈರಲ್ ಆಗಿರುವುದು ಸಂಚಲನ ಮೂಡಿಸಿದೆ. ಉಮ್ಮಣ್ಣ (ಉಮಾಪತಿ) ನನ್ನ ತಂದೆ ಇದ್ದಂತೆ. ಅವರೇ ನನಗೆ ಅಧ್ಯಕ್ಷ ಮಾಡಿದ್ದು, ಸ್ವಾಮೀಜಿ ಯಾರೆಂದು ನನಗೆ ಗೊತ್ತಿಲ್ಲ, ಸ್ವಾಮೀಜಿ ನನಗೆ ಪರಿಚಯ ಆಗಿದ್ದೇ ಕಿಚಡಿ ಕೊಟ್ರೇಶ್ ಅವರಿಂದ, ಅ ಸ್ವಾಮೀಜಿಯನ್ನು ಮಾಡಬೇಡಿ ಎಂದಿದ್ದೆ. ನಾನು ವಚನಾನಂದ ಸ್ವಾಮೀಜಿ ಅವರನ್ನು ನಂಬಿದ್ದಿಲ್ಲ, ಸ್ವಾಮೀಜಿ ಅವರಿಂದ ನಾನು ಒಂದು ರೂಪಾಯಿ ಪಡೆದಿಲ್ಲ. ಸ್ವಾಮೀಜಿ ರಾತ್ರಿ ಹೋಗಿ ಉಮ್ಮಣ್ಣ ನೀನೇ ಎಂದು ಕೈ ಮುಗಿದರೆ ಸಾಕು, ಮಾಜಿ ಶಾಸಕ ಶಿವಶಂಕರ ಅವರು ವಿವಾದದ ನಡುವೆ ಎಂಟ್ರಿ ಕೊಡಲು ಹೇಳಿದ್ದೇ ನಾನು ಎಂದು ವಿಡಿಯೋದಲ್ಲಿ ಮಾಲಿಪಾಟೀಲ್ ಅವರು ಹೇಳಿದ್ದಾರೆ.

ವಚನಾನಂದ ಸ್ವಾಮೀಜಿ ಹೇಳಿದ್ದೇನು: ಟಟಸೋಮನಗೌಡ ಮಾಲಿಪಾಟೀಲ್ ಅವರು 1994ರಿಂದ ಈ ಸಂಘದಲ್ಲಿದ್ದಾರೆ. ಅವರನ್ನು ಎಕೆ47 ಎಂದು ಕರೆಯುತ್ತಾರೆ. ಅವರು ಕಟ್ಟಿದ ಸಮಾಜದಲ್ಲಿ ಇವರು ಹೊಕ್ಕಿಕೊಂಡಿದ್ದಾರೆ. ಇವರ ಕೊಡುಗೆ ಏನೂ ಇಲ್ಲ. ನಾನು ಮಾಡಿದೆ ನಾನು ಕಟ್ಟಿದೆ ಎಂಬ ಭ್ರಮೆಯಲ್ಲಿದ್ದರು. ಟ್ರಸ್ಟಿಗಳಿಗೆ ಲೆಕ್ಕ ಕೇಳಿ ಬೆತ್ತದಿಂದ ಬಡಿದಿದ್ದಾರೆ. ಒಬ್ಬ ಧರ್ಮದರ್ಶಿಗೆ ಮಹಾಂತ ಸ್ವಾಮಿಗಳು ಬೆತ್ತದಿಂದ ಹೊಡೆದಿದ್ದು, ಇನ್ನು ಸಿದ್ಧಲಿಂಗ ಸ್ವಾಮೀಜಿ ಅವರಿಗೂ ಇವರು ಕಿರುಕುಳ ಕೊಟ್ಟರು. ಅಂದು ಸಮಾಜ ಜಾಗೃತ ಆಗಿರಲಿಲ್ಲ. ಇಂದು ಅದೇ ಸಮಾಜ ಜಾಗೃತ ಆಗಿದೆ. ಇನ್ನು ನಮ್ಮ ಮಾಲಿಪಾಟೀಲ್ ಅವರು ಟ್ರಸ್ಟಿಗಳನ್ನು ಉಚ್ಚಾಟನೆ ಮಾಡಿದ್ದಾರೆ ಎಂದು ವಚನಾನಂದ ಸ್ವಾಮೀಜಿ ಎಂದರು.

ಇಂದು ನಮಗೆ ಖುಷಿ ಕೊಟ್ಟ ದಿನ. ಕಳ್ಳರಾಗಿ ಬಂದು ಪೊಲೀಸರ ನೇತೃತ್ವದಲ್ಲಿ ಲೆಕ್ಕಕೊಟ್ಟು ಹೋಗಲು ಬಂದಿದ್ದಾರೆ. ಇದನ್ನು ಸಮಾಜ ಒಪ್ಪುವುದಿಲ್ಲ. ನಮಗೆ ಕೃಷ್ಣನ ಲೆಕ್ಕ ಬೇಕಾಗಿಲ್ಲ, ರಾಮನ ಲೆಕ್ಕ ಬೇಕಾಗಿದೆ. ಮಠಕ್ಕೆ ದವಸ ಧಾನ್ಯ, ಬಂಗಾರ, ಬೆಳ್ಳಿ ಎಲ್ಲವನ್ನೂ ಕೊಟ್ಟಿದ್ದಾರೆ. ಎಲ್ಲಾ ಲೆಕ್ಕ ಕೊಡಬೇಕು, ತಾವು ಮೊಸರು ತಿಂದು ಮೇಕೆ ಬಾಯಿಗೆ ಒರೆಸುವುದಲ್ಲ. ಕಾವಿ ಎಂಬುದು ಬೆಂಕಿ. ಇದನ್ನು ಎಷ್ಟು ಬೇಕು ಅಷ್ಟೇ ಉಪಯೋಗಿಸಬೇಕು. ಇನ್ನು ಭಕ್ತರು ನಮ್ಮನ್ನು ಕಾಯುತ್ತಿದ್ದಾರೆ. ಪ್ರಧಾನ ಧರ್ಮದರ್ಶಿ ಮಹಾಂತ ಸ್ವಾಮೀಜಿ ಅವರ ಫೋಟೋ ಮನೆಯಲ್ಲಿ ಇಟ್ಟುಕೊಂಡಿಲ್ಲ. ಇವರು ಮಾಡಿರುವ ಅವ್ಯವಹಾರ ಜಗಜ್ಜಾಹೀರಾಗಿದೆ. ಅದಕ್ಕೆ ನಾವು ನಮ್ಮ ಭಕ್ತರು ಲೆಕ್ಕವನ್ನು ಕೇಳುತ್ತಿದ್ದೇವೆ. ಅ ಲೆಕ್ಕ ಪಾರದರ್ಶಕವಾಗಿ ಇರಬೇಕು. 2008ರಿಂದ ಇಲ್ಲಿ ತನಕ ಏನೆಲ್ಲ ಮಠಕ್ಕೆ ಬಂದಿದೆ. ಅದರ ಬಗ್ಗೆ ಲೆಕ್ಕ ಕೊಡಬೇಕು. ಇನ್ನು ಮಹಾಂತ ಸ್ವಾಮೀಜಿ ಅವರಿಗೆ ಇವರು ಎಷ್ಟೆಲ್ಲಾ ಕಿರುಕುಳ ಕೊಟ್ಟಿದ್ದಾರೆ.

# ಚಿಕ್ಕಮಗಳೂರಿನ ಯಗಚಿ ಹಳ್ಳ ಸೇರ್ತಿದೆ ಕಲುಷಿತ ನೀರು ಪತ್ರಕರ್ತನ ದೂರಿಗೆ ಸ್ಪಂದಿಸಿದ ಪ್ರಧಾನಿ ಕಚೇರಿ

■ ಕನ್ನಡ ಮಾತೃ ಭೂಮಿ ವಾರ್ತೆ



**ಚಿಕ್ಕಮಗಳೂರು,ಏ.27-**ಯಗಚಿ ಹಳ್ಳಕ್ಕೆ ಕೊಳಚೆ ನೀರು ಸೇರುತ್ತಿರುವ ಸಮಸ್ಯೆ ಈಗ ರಾಷ್ಟ್ರಮಟ್ಟದ ಗಮನ ಸೆಳೆದಿದೆ. ಚಿಕ್ಕಮಗಳೂರಿನ ರಾಮೇಶ್ವರ ಬಡಾವಣೆಯಲ್ಲಿರುವ ಈ ಹಳ್ಳದ ನೀರು ನೇರವಾಗಿ ಯಗಚಿ ಡ್ಯಾಂ ಸೇರುತ್ತಿದ್ದು, ಕುಡಿಯುವ ನೀರು ಕಲುಷಿತಗೊಳ್ಳುತ್ತಿರುವ ಬಗ್ಗೆ ಸ್ಥಳೀಯರಲ್ಲಿ ಆತಂಕ ಮೂಡಿದೆ.

ಅಧಿಕಾರಿಗಳ ನಿರ್ಲಕ್ಷ್ಯದ ವಿರುದ್ಧ ದೂರು: ನಗರಸಭೆ ಅಧಿಕಾರಿಗಳ ನಿರ್ಲಕ್ಷ್ಯದ ವಿರುದ್ಧ ಪತ್ರಕರ್ತ ದಿನೇಶ್ ಪಟವರ್ಧನ್ ಅವರು ಪ್ರಧಾನಿ ಕಚೇರಿಗೆ ಪತ್ರ ಬರೆದು ದೂರು ನೀಡಿದ್ದರು. ಈ ದೂರಿಗೆ ತಕ್ಷಣ ಸ್ಪಂದಿಸಿರುವ ಪ್ರಧಾನಿ ಕಚೇರಿ, ಕೂಡಲೇ ತನಿಖೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದೆ.

ನಗರದ ರಾಮೇಶ್ವರ ದೇವಸ್ಥಾನದ ಸಮೀಪವೇ ಕೊಳಚೆ ನೀರು ಹರಿಯುತ್ತಿ ರುವುದರಿಂದ ಇಡೀ ಪ್ರದೇಶದಲ್ಲಿ ದುರ್ವಾಸನೆ ಹರಡಿದ್ದು, ಪರಿಸರ ಮಾಲಿನ್ಯ ಉಂಟಾಗಿದೆ. ಇದರಿಂ ದಾಗಿ ದೇವಸ್ಥಾನಕ್ಕೆ ಬರುವ ಭಕ್ತರು ಹಾಗೂ ಸ್ಥಳೀಯ ನಿವಾಸಿಗಳು ತೀವ್ರ ತೊಂದರೆ ಅನುಭವಿಸುತ್ತಿ ದ್ದಾರೆ.

ಕಲುಷಿತ ನೀರಿನಿಂದಾಗಿ ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಎದುರಾಗಿದ್ದು, ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಯಗಚಿ ಹಳ್ಳವನ್ನು ತಕ್ಷಣ ಸ್ವಚ್ಛಗೊಳಿಸಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ. ಪ್ರಧಾನಿ ಕಚೇರಿಯ ಮಧ್ಯಪ್ರವೇಶದಿಂದಾಗಿ ಈಗಲಾದರೂ ಹಳ್ಳಕ್ಕೆ ಮುಕ್ತಿ ಸಿಗಬಹುದು ಎಂಬ ನಿರೀಕ್ಷೆಯಲ್ಲಿ ಜನರಿದ್ದಾರೆ.ದಿನೇಶ್ ಪಟವರ್ಧನ್ ಅವರು ಈಟಿವಿ ಭಾರತಕ್ಕೆ ಪ್ರತಿಕ್ರಿಯಿಸಿ, ನಗರದ ಹೃದಯ ಭಾಗದ ಲ್ಲಿ ಹರಿಯುವ ಯಾಗಚಿ ಹಳ್ಳ ರಾಮೇಶ್ವರ ದೇವಸ್ಥಾನದ ಮುಂದೆ ಹರಿಯುತ್ತದೆ. ಮಳೆಗಾಲದಲ್ಲಿ ಅತಿ ಹೆಚ್ಚು ನೀರು

ಈ ಹಳ್ಳದಲ್ಲಿ ಹರಿಯುವುದರಿಂದ ಯಾವುದೇ ಸಮಸ್ಯೆ ಆಗುವುದಿಲ್ಲ. ಆದರೆ ಬೇರೆ ಸಂದರ್ಭದಲ್ಲಿ ಇಡೀ ಊರಿನ ಕಲುಷಿತ ನೀರು ಈ ಹಳ್ಳಕ್ಕೆ ಸೇರಿ ತುಂಬಾ ತೊಂದರೆ ಆಗುತ್ತಿದೆ ಎಂದರು.

ಈ ಕುರಿತಂತೆ ಪ್ರಧಾನಿ ಕಚೇರಿಗೆ ನಾನು ಮೂರು ಬಾರಿ ಪತ್ರ ಬರೆದಿದ್ದೇನೆ. ಈ ಹಿಂದೆ ಆರೋಗ್ಯ ಇಲಾಖೆಗೆ ನಂತರ ನಗರ ನೀರು ಸರಬರಾಜು ಇಲಾಖೆಗೆ ಪತ್ರ ಬರೆದಿದ್ದೇನೆ. ಆದರೆ ಯಾವುದೇ ಅಧಿಕಾರಿಗಳು

ಇಲ್ಲಿಗೆ ಬಂದು ಸ್ಥಳ ಪರಿಶೀಲನೆ ಮಾಡದೆ ಫೈಲ್ ಕ್ಲೋಸ್ ಮಾಡಿದ್ದರು. ಈಗ ಮತ್ತೊಮ್ಮೆ ಪ್ರಧಾನಿ ಕಚೇರಿಗೆ ಪತ್ರ ಬರೆದ ಹಿನ್ನೆಲೆಯಲ್ಲಿ ಪರಿಸರ ಇಲಾಖೆಗೆ ಸ್ಥಳ ಪರಿಶೀಲನೆ ಮಾಡುವಂತೆ ಪ್ರಧಾನಿ ಕಚೇರಿಯಿಂದ ಪತ್ರ ಬರೆಯಲಾಗಿದೆ ಎಂದು ಹೇಳಿದರು.

ಈಗ ಬೇಸಿಗೆ ದಿನ ಆಗಿರುವುದರಿಂದ ನಗರದ ನೀರೆಲ್ಲ ಈ ಹಳ್ಳದಲ್ಲಿ ಹರಿಯುತ್ತಿದೆ, ಸಂಜೆ ವೇಳೆಗೆ ದುರ್ವಾಸನೆ ಈ ಭಾಗದಲ್ಲಿ ಹರಡುತ್ತದೆ, ದೇವಸ್ಥಾನಕ್ಕೆ ಬರುವಂತಹ ಭಕ್ತಾದಿಗಳಿಗೆ ತೊಂದರೆ ಉಂಟಾಗುತ್ತಿದೆ. ಇದೇ ಕಲುಷಿತ ನೀರು ನಮ್ಮ ನಗರಕ್ಕೆ ಸರಬರಾಜು ಆಗುತ್ತಿರುವಂತಹ ಯಗಚಿ ಹಳ್ಳಕ್ಕೆ ಹೋಗಿ ಸೇರುತ್ತದೆ.

ಇದರಿಂದ ಪರಿಸರ ಮಾಲಿನ್ಯ ಹಾಳಾಗುತ್ತಿದ್ದು, ಸುಮಾರು ಎಂಟು ಕಿಲೋಮೀಟರ್ ಉದ್ದಕ್ಕೂ ಇದೇ ರೀತಿಯ ಸಮಸ್ಯೆ ಆಗುತ್ತಿದೆ.

ಹೊಸದಾಗಿ ಕಾಮಗಾರಿ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಆದರೆ ಮುಂದಿನ ದಿನಗಳಲ್ಲಿ ಅದರ ಫಲಿತಾಂಶ ಏನಾಗಲಿದೆ ಎಂಬುದನ್ನು ಕೂಡ ಕಾದು ನೋಡಬೇಕಿದೆ ಎಂದರು.

## ದೇಶವ್ಯಾಪ್ತಿ ಕೃಷಿ ಪರಿಕರಗಳ ಮಾರಾಟ ಬಂದ್ ಯಶಸ್ವಿ

# ಬಳ್ಳಾರಿಯಲ್ಲಿ ಕೃಷಿ ಪರಿಕರ ಮಾರಾಟ ಬಂದ್ ಶಾಂತಿಯುತವಾಗಿ ಯಶಸ್ವಿ





■ ಕನ್ನಡ ಮಾತೃ ಭೂಮಿ ವಾರ್ತೆ

**ಬಳ್ಳಾರಿ,**ಆಲ್ ಇಂಡಿಯಾ ಅಗ್ರಿ ಡೀಲರ್ಸ್ ಅಸೋಸಿಯೇಷನ್ ನೀಡಿದ ಕರೆ ಮೇರೆಗೆ ಬಹುಕಾಲದಿಂದ ಬಾಕಿ ಉಳಿದ ಎಲ್ಲಾ ಬೇಡಿಕೆಗಳ ಈಡೇರಿಕೆಗಾಗಿ ದೇಶವ್ಯಾಪ್ತಿ ಕೃಷಿ ಪರಿಕರಗಳ ಮಾರಾಟ ಬಂದ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಇದರ ಭಾಗವಾಗಿ ನಗರದಲ್ಲಿ ಕರ್ನಾಟಕ ರಾಜ್ಯ ಕೃಷಿ ಪರಿಕರ ಮಾರಾಟಗಾರರ ಸಂಘ ನೇತೃತ್ವದಲ್ಲಿ ಕೃಷಿ ಪರಿಕರಗಳ ಅಂಗಡಿಗಳನ್ನು ಮುಚ್ಚಿ ಬಂದ್ ಆಚರಿಸಲಾಯಿತು.

ಬಳ್ಳಾರಿ ಜಿಲ್ಲೆಯಲ್ಲಿ ಸಹ ಸಂಪೂರ್ಣ ಬೆಂಬಲ ದೊರೆತಿದ್ದು, ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಎಲ್ಲಾ ಕೃಷಿ ಪರಿಕರ ಮಾರಾಟಗಾರರು ಅಂಗಡಿಗಳನ್ನು ಮುಚ್ಚಿ ಶಾಂತಿಯುತವಾಗಿ ಬಂದ್‌ಗೆ ಕೈಜೋಡಿಸಿದರು.

ಈ ಬಂದ್ ಶಾಂತಿಯುತವಾಗಿ ನಡೆದಿದ್ದು, ಮಾರಾಟಗಾರರ ಬೇಡಿಕೆಗಳ ಪರ ಒಗ್ಗಟ್ಟಿನ ಸಂದೇಶ ನೀಡಿತು.

# ಕ್ಷೇತ್ರ ವಿಂಗಡಣೆ ಜೊತೆ ಮಹಿಳಾ ಮೀಸಲಾತಿ ಸೇರಿಸಿದ್ದಕ್ಕೆ ಕಾಂಗ್ರೆಸ್ ವಿರೋಧ: ಅನ್ನಪೂರ್ಣ



■ ಕನ್ನಡ ಮಾತೃ ಭೂಮಿ ವಾರ್ತೆ

**ಬಳ್ಳಾರಿ,**ಸಂಸತ್ ನಲ್ಲಿ ಶೇ 33 ಮಹಿಳಾ ಮೀಸಲಾತಿ ಬಿಲ್ 2023 ರಲ್ಲಿಯೇ ಸಂಸತ್ ನಲ್ಲಿ ಪಾಸ್‌ಆಗಿದೆ. ನಂತರ ಅದನ್ನು ಜಾರಿಗೆ ತರದೇ ಈಗ ತರಾ ತುರಿಯಲ್ಲಿ ಕ್ಷೇತ್ರ ಮರುವಿಂಗಡಣೆ ಜೊತೆಗೆ ಈ ಬಿಲ್ ತಿದ್ದುಪಡಿಗೆ ತಂದಿದ್ದರಿಂದ ಕಾಂಗ್ರೆಸ್ ಹಾಗು ಮಿತ್ರ ಪಕ್ಷಗಳು ವಿರೋಧ ಮಾಡಿದೆಂದು ಸಂಡೂರು ಶಾಸಕಿ ಅನ್ನಪೂರ್ಣ ತುಕರಾಂ ಹೇಳಿದ್ದಾರೆ.

ಅವರು ಇಂದು ನಗರದಲ್ಲಿನ ಪಕ್ಷದ ಜಿಲ್ಲಾ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡುತ್ತಿದ್ದರು.

ಜನಸಂಖ್ಯಾ ಆಧಾರದ ಮೇಲೆ ಮೀಸಲಾತಿ ತರವ ಹುನ್ನಾರ ಬಿಜೆಪಿಯರದ್ದಾಗಿತ್ತು. ಅದು ಆದರೆ ಉತ್ತರ ಭಾರತದಲ್ಲಿ ಕ್ಷೇತ್ರಗಳ ಸಂಖ್ಯೆ ಹೆಚ್ಚಿ, ದಕ್ಷಿಣ ಭಾರತದವರಿಗೆ ಅನ್ಯಾಯವಾಗುತ್ತಿತ್ತು ಅದಕ್ಕೆ ಮಹಿಳಾ ಮೀಸಲಾತಿ ಬಿಲ್ ನ್ನು ವಿರೋಧಿಸಿದೆ ಎಂದು ಸಮರ್ಥಿಸಿಕೊಂಡರು.

ಈ ಹಿಂದೆ 2014 ರಲ್ಲಿಯೇ ಅಧಿಕಾರಕ್ಕೆ ಬಂದ ಎನ್ ಡಿಎ ಕೂಟ ಈ ವರೆಗೆ ಯಾಕೆ ಮಹಿಳಾ ಮೀಸಲಾತಿಯನ್ನು ತರಲಿಲ್ಲ. ಹೀಗ ಯಾಕೆ ಏಕಾ ಏಕಿ ಮಹಿಳೆಯರ ಮೇಲೆ ಪ್ರೀತಿ ಹೆಚ್ಚಾಯ್ತು ಎಂದು ಪ್ರಶ್ನಿಸಿದರು.

ಸುದ್ದಿಗೋಷ್ಟಿಯಲ್ಲಿ, ಜಿಲ್ಲಾ ಅಧ್ಯಕ್ಷೆ ಮಂಜುಳಾ, ನಾಗಮಣಿ ಜಿಂಕಲ್ , ಆಶಾಲತಾ ಸೋಮಪ್ಪ, ರಾಜೇಶ್ವರಿ, ಕಮಲ ಮರಿಸ್ವಾಮಿ, ಮಂಜುಳ, ಶಮೀಮ್ ಜಕ್ಲಿ ಮೊದಲಾದವರು ಇದ್ದರು.


## ನಿಜ ಪ್ರಕರಣಗಳಲ್ಲಿ ಪೊಲೀಸರು ಪ್ರಕರಣ ದಾಖಲಿಸಲ್ಲ

# ಹೈಕೋರ್ಟ್ ಅಸಮಾಧಾನ, ಹಸು ಕಳವು ಪ್ರಕರಣಕ್ಕೆ ತಡೆ

**ಬೆಂಗಳೂರು,ಏ.27-**ಹಸುಗಳು ಕಳ್ಳತನವಾಗಿವೆ ಎಂದು ಪ್ರಕರಣ ದಾಖಲಿಸುವ ಪೊಲೀಸರು, ನಿಜವಾದ ಆರೋಪಕ್ಕೆ ಸಂಬಂಧಿಸಿದಂತೆ ಹಲವು ಬಾರಿ ಠಾಣೆಯ ಮೆಟ್ಟಿಲೇರಿದರೂ ಪ್ರಕರಣ ದಾಖಲಿಸಲು ಮುಂದಾಗುವುದಿಲ್ಲ ಎಂದು ರಾಜ್ಯ ಪೊಲೀಸರ ಕುರಿತು ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

ಬೆಂಗಳೂರು ದಕ್ಷಿಣ ಜಿಲ್ಲೆಯ (ರಾಮನಗರ) ಚನ್ನಪಟ್ಟಣ ತಾಲೂಕಿನ ಎಂ.ಕೆ.ದೊಡ್ಡಿಯ ಮಂಗಳಂ ಮತ್ತಿತರರು ತಮ್ಮ ವಿರುದ್ಧದ ಹಸು ಕಳವು ಪ್ರಕರಣ ರದ್ದು ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ಪ್ರಕರಣಕ್ಕೆ ತಡೆ ನೀಡಿ, ಈ ಅಭಿಪ್ರಾಯ ವ್ಯಕ್ತಪಡಿಸಿದೆ. ತನಿಖೆಗೆ ಅನುಮತಿಸಿದರೆ ಕಾನೂನಿನ ದುರ್ಬಳಕೆ: ಅಲ್ಲದೆ, ಟಹಸುಗಳು ನಾಪತ್ತೆ! ಆರೋಪ ಪಟ್ಟಿ ಸಲ್ಲಿಕೆಯಾಗಿದೆಯೇ? ಅದಕ್ಕೂ (ಆರೋಪ ಪಟ್ಟಿ) ಹಾಕಿ ಬಿಡ್ತಾರೆ, ಅದಕ್ಕೆ ಕೇಳಿದೆಟ ಎಂದ ಪೀಠವು 2024ರಲ್ಲಿ ಎರಡು ಹಸುಗಳು ನಾಪತ್ತೆಯಾಗಿದ್ದು, ಅವು ಪತ್ತೆಯಾಗಿಲ್ಲ ಎಂದು ಇಡೀ ಕುಟುಂಬದ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಇದರ ತನಿಖೆಗೆ ಅನುಮತಿಸಿದರೆ ಅದು ಕಾನೂನಿನ ದುರ್ಬಳಕೆಯಾಗಲಿದೆ. ಈ ಹಿನ್ನೆಲೆಯಲ್ಲಿ ಪ್ರಕರಣದ ತನಿಖೆಗೆ ತಡೆ ನೀಡಲಾಗಿದೆ ಎಂದು ತಿಳಿಸಿದೆ.ನೀವು (ರಾಜ್ಯ ಸರ್ಕಾರ) ಹಸುಗಳ ತನಿಖೆ ಮಾಡುವುದನ್ನು ಬಿಡಿ. ನಿಜವಾದ ಅಪರಾಧದ ಹಿಂದೆ ಹೋಗಿ. ಎರಡು ವರ್ಷದ ಹಿಂದೆ ಹಸು ಕಾಣೆಯಾಗಿದೆ ಎಂದ ತಕ್ಷಣ ಅಪರಾಧ ದಾಖಲಿಸುವುದೇ? ಏನು ಬೇಕಾದರೂ ಮಾಡಿ ಬಿಡುತ್ತೀರಿ. ನಿಜವಾದ ಅಪರಾಧ ಪ್ರಕರಣವನ್ನು ನೀವು ದಾಖಲಿಸುವುದೇ ಇಲ್ಲ. ಅದಕ್ಕೆ ಜನರು ನೂರು ಬಾರಿ ಪೊಲೀಸ್ ಠಾಣೆ ಮೆಟ್ಟಿಲೇರಬೇಕು. ಎರಡು ವರ್ಷಗಳ ಹಿಂದೆ ಎರಡು ಹಸುಗಳು ನಾಪತ್ತೆಯಾಗಿದ್ದಕ್ಕೆ ಪ್ರಕರಣ ದಾಖಲಿಸಿದ್ದೀರಿ ಎಂದು ಕಟುವಾಗಿ ನುಡಿಯಿತು.

# ಕುಡಿತಿನಿ: ಸೀತಾರಾಮ ದೊಡ್ಡ ಆಂಜನೇಯಸ್ವಾಮಿ ರಥೋತ್ಸವ



■ ಕನ್ನಡ ಮಾತೃ ಭೂಮಿ ವಾರ್ತೆ

**ಬಳ್ಳಾರಿ,**ತಾಲೂಕಿನ ಕುಡಿತಿನಿ ಪಟ್ಟಣದ ಶ್ರೀ ಸೀತಾರಾಮ ದೇವರ ಹಾಗೂ ಶ್ರೀ ದೊಡ್ಡ ಆಂಜನೇಯಸ್ವಾಮಿ ದೇವರ ರಥೋತ್ಸವ ನಿನ್ನೆ ಸಂಜೆ ಸಡಗರ ಸಂಭ್ರಮದಿಂದ ಜರುಗಿತು.

ಬೆಳಿಗ್ಗೆ ದೇವಾಲದಲ್ಲಿ ಮೂರ್ತಿಗಳಿಗೆ ಪಂಚಾಮೃತ ಅಭಿಷೇಕ, ಹವನ. ಹಾಗೂ ಶ್ರೀ ಸೀತಾರಾಮ ಕಲ್ಯಾಣೋತ್ಸವ ಜರುಗಿತು. ನೂರಾರು ಭಕ್ತರು ಹರಕೆ ಸಲ್ಲಿಸುವುದು ಕಂಡುಬಂತು.

ಸುತ್ತ ಮುತ್ತಲಿನ ಗ್ರಾಮಗಳಾದ ಹೊರಗಿನದೋಣಿ, ತಿಮ್ಮಲಾಪುರ, ಏಳುಬೆಂಚಿ, ತೋರಣಗಲ್ಲು, ತಾಳೂರು ಸೇರಿದಂತೆ ಹಲವು ಹಳ್ಳಿಗಳ ಭಕ್ತಜನ ಸ್ತೋಮ ಭಾಗಿಯಾಗಿದ್ದರು.

# ಕಲ್ಯಾಣ ಕರ್ನಾಟಕದ ಕುರುಬ ಸಮುದಾಯದ ರಾಘವೇಂದ್ರ ಹಿಟ್ನಾಳ್‌ಗೆ ಸಚಿವ ಸ್ಥಾನ ನೀಡಿ

■ ಕನ್ನಡ ಮಾತೃ ಭೂಮಿ ವಾರ್ತೆ



**ಬಳ್ಳಾರಿ,** ಕಲ್ಯಾಣ ಕರ್ನಾಟಕದ ಕುರುಬ ಸಮುದಾಯದವರಾದ ಕೊಪ್ಪಳದಲ್ಲಿ ಮೂರನೇ ಬಾರಿ ಶಾಸಕರಾಗಿರುವ ರಾಘವೇಂದ್ರ ಹಿಟ್ನಾಳ್ ಗೆ ಸಚಿವ ಸ್ಥಾನ ನೀಡಿ ಎಂದು ಬಳ್ಳಾರಿ ಜಿಲ್ಲಾ ಕುರುಬ ಸಮಾಜದ ಮುಖಂಡರು ಕಾಂಗ್ರೆಸ್ ಪಕ್ಷದ ಹೈ ಕಮಾಂಡಿಗೆ ಒತ್ತಾಯಿಸಿದ್ದಾರೆ.

ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಡಾ.ಗಾದಿಲಿಂಗನಗೌಡ, ಅವರು ನಗರದ ಪತ್ರಿಕಾ ಭವನದಲ್ಲಿ ಇಂದು ಸುದ್ದಿಗೋಷ್ಟಿ ನಡೆಸಿ. ನಾವು ಶೇ 90 ರಷ್ಟು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದರೂ. ನಮ್ಮ ಸಮಾಜಕ್ಕೆ ನ್ಯಾಯಯುತವಾದ ಸ್ಥಾನಮಾನ ದೊರೆಯುತ್ತಿಲ್ಲ ಎಂದು ಆರೋಪಿಸಿದರು. ಡಿಸಿಸಿ ಅಧ್ಯಕ್ಷರಾಗಿಲ್ಲ. ಜಿಪಂ ಅಧ್ಯಕ್ಷರಾಗಿಲ್ಲ. ಆದರೂ ಈವರೆಗೆ ಸುಮನಿರುವುದು ಏಕೆಂದರೆ, ನಮ್ಮಸಮಾಜದವರೇ ಸಿಎಂ ಇದ್ದಾರೆಂಬ ಕಾರಣಕ್ಕೆ. ನೀಡುತ್ತಿಲ್ಲ. ಈ ಹಿಂದೆ ಬಳ್ಳಾರಿ ಜಿಲ್ಲೆಯಿಂದ ಹಡಗಲಿಯ ಈ.ಟಿ.ಶಂಬುನಾಥ ಅವರಿಗೆ ಟಿಕೆಟ್ ನೀಡಿ, ಸಚಿವ ಸ್ಥಾನ ನೀಡಿದ್ದು ಬಿಟ್ಟರೆ ನಂತರ ನಮಗೆ ಟಿಕೆಟ್ ನೀಡಿಲ್ಲ.ಈಗ ನಮ್ಮಬೇಡಿಕೆ ಎಂದರೆ ಕಲ್ಯಾಣ ಕರ್ನಾಟಕದ ಭಾಗಕ್ಕೆ ಒತ್ತು ನೀಡಿ. ಸಂಪುಟ ಪುನರ್ ರಚನೆ ಆದರೆ ನಮ್ಮ ಸಮಾಜದವರಾದ ಕೊಪ್ಪಳದ ಶಾಸಕ ರಾಘವೇಂದ್ರ ಹಿಟ್ನಾಳ್ ಅವರಿಗೆ ಸಚಿವ ಸ್ಥಾನ ನೀಡಬೇಕು. ಜೊತೆಗೆ ಒಂದು ಎಂಎಲ್ಸಿ ಸ್ಥಾನವನ್ನು ನಮ್ಮ ಸಮಾಜದವರಿಗೆ ನೀಡಬೇಕು. ಜೊತೆಗೆ ನಿಗಮ ಮಂಡಳಿಯಲ್ಲೂ ಪಕ್ಷದಲ್ಲಿ ಸಕ್ರೀಯವಾಗಿರುವವ ಇಬ್ಬರಿಗೆ ನೀಡಿ.. ಅದರಲ್ಲಿ ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹುದ್ದೆಯನ್ನು ನೀಡಿ ಬೇಕೆಂದರು. ಸುದ್ದಿಗೋಷ್ಟಿಯಲ್ಲಿ ಬೆಣಕಲ್ ಬಸವರಾಜ್ ಗೌಡ, ಬಿ.ಕೆ.ಕೆರಕೋಡಪ್ಪ, ದಮ್ಮೂರು ಸೋಮಪ್ಪ, ಕೆ.ಹೊನ್ನಪ್ಪ, ಗಾದಿಲಿಂಗನಗೌಡ, ಚನ್ನಬಸವರಾಜ್, ಕುಡುತಿನಿ ರಾಮಾಂಜನೇಯ, ಉಮಾಪತಿ, ಓಂಕಾರಪ್ಪ, ಗುರುಪಾದ ಮೊದಲಾದವರು ಇದ್ದರು.

# ಬೆಳಗಾವಿ: ವರದಕ್ಷಿಣೆ ಕಿರುಕುಳಕ್ಕೆ ಗೃಹಿಣಿ ಆತ್ಮಹತ್ಯೆ

■ ಕನ್ನಡ ಮಾತೃ ಭೂಮಿ ವಾರ್ತೆ

**ಬೆಳಗಾವಿ,ಏ.27**–ವರದಕ್ಷಿಣೆ ಕಿರುಕುಳಕ್ಕೆ ಬೇಸತ್ತು ಗೃಹಿಣಿ ಆತ್ಮಹತ್ಯೆ ಮಾಡಿಕೊಂಡ ಅತ್ಯಂತ ದುರದೃಷ್ಟಕರ ಘಟನೆ ಬೆಳಗಾವಿಯ ಜ್ಯೋತಿ ನಗರದಲ್ಲಿ ನಡೆದಿದೆ.



ಶ್ರೀನಿಧಿ ಸಂತೋಷ್ ನಾವಿ (28) ಆತ್ಮಹತ್ಯೆ ಮಾಡಿಕೊಂಡ ಗೃಹಿಣಿ. ಶ್ರೀನಿಧಿ ಹಾಗೂ ಸಂತೋಷ್ 2021ರಲ್ಲಿ ಮದುವೆಯಾಗಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದು, ಗಂಡ, ಹೆಂಡತಿ ಮಧ್ಯೆ ಆಗಾಗ ಗಲಾಟೆ ನಡೆಯುತ್ತಿತ್ತು. ಕೌಟುಂಬಿಕ ಕಲಹ, ಕಿರುಕುಳಕ್ಕೆ ಬೇಸತ್ತು ಮನೆಯ ಮೊದಲ ಮಹಡಿಯಲ್ಲಿ ಗೃಹಿಣಿ ನೇಣಿಗೆ ಶರಣಾಗಿದ್ದಾರೆ.

ತವರು ಮನೆಯವರೊಂದಿಗೆ ಮಾತನಾಡ ಬಾರದೆಂದು ಮೊಬೈಲ್ ಫೋನ್ ಕಿತ್ತುಕೊಂಡಿದ್ದ ಎಂದು ಶ್ರೀನಿಧಿ ಕುಟುಂಬಸ್ಥರು ಆರೋಪಿಸಿದ್ದಾರೆ.

ಗಂಡ, ಅತ್ತೆ ಹಾಗೂ ಇನ್ನಿಬ್ಬರೂ ಸಂಬಂಧಿಕರ ವಿರುದ್ಧ ಶ್ರೀನಿಧಿ ಕುಟುಂಬಸ್ಥರು ವರದಕ್ಷಿಣೆ ಕಿರುಕುಳ ದೂರು ನೀಡಿದ್ದಾರೆ. ಘಟನೆ ಸಂಬಂಧ ಬೆಳಗಾವಿ ಎಪಿಎಂಸಿ ಠಾಣೆಯಲ್ಲಿ ಕೇಸ್ ದಾಖಲಾಗಿದೆ.

# ರಾಜ್ಯದಲ್ಲಿ ಅಹಿಂದ ಕ್ರಾಂತಿ ನಡೆಯಲಿದೆ: ಸತೀಶ ಜಾರಕಿಹೊಳಿ

■ ಕನ್ನಡ ಮಾತೃ ಭೂಮಿ ವಾರ್ತೆ




**ಹುಬ್ಬಳ್ಳಿ,ಏ.27**– ರಾಜ್ಯದಲ್ಲಿ ಅಹಿಂದ ಕ್ರಾಂತಿ ನಡೆಯಲಿದೆ. 2028 ಮೇ ವರೆಗೆ ಪ್ರತಿ ಜಿಲ್ಲೆಯಲ್ಲೂ ಸಮಾವೇಶ, ವಿಚಾರ ಸಂಕಿರಣ ನಡೆಯಲಿದೆ. ಇಲ್ಲಿಂದ ಎರಡನೇ ಹೋರಾಟವಾಗಲಿದೆ. ನಮ್ಮ ರಕ್ಷಣೆ. ಹೋರಾಟ, ಅಧಿಕಾರ, ಸೌಲಭ್ಯ ಪಡೆಯುವುದಾಗಿದೆ ಎಂದು ಅಹಿಂದ ನಾಯಕ, ಸಚಿವ ಸತೀಶ ಜಾರಕಿಹೊಳಿ ಅಹಿಂದ ಹೋರಾಟಗಾರರಿಗೆ ಕರೆ ನೀಡಿದರು.

ರವಿವಾರ ಗೋಕುಲ ರಸ್ತೆಯ ರಾಯಲ್ ರಿಟ್ಸ್ ಹೋಟೆಲ್‌ನಲ್ಲಿ ಅಹಿಂದ ಕರ್ನಾಟಕ ಹೋರಾಟಕ್ಕೆ 25 ವರ್ಷ ತುಂಬಿದ ಹಿನ್ನೆಲೆಯಲ್ಲಿ ರಾಜ್ಯ ಮಟ್ಟದ ಟಿಅಹಿಂದ ಹೋರಾಟ ಸಾಧನೆ, ಸಂಕಲ್ಪ ವಿಚಾರ ಸಂಕಿರಣಟಿ ಉದ್ಘಾಟಿಸಿ, ಅಹಿಂದ ದಾರಿ ಮತ್ತು ಗುರಿ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದರು.

ಹಿಂದಿನ ಹೋರಾಟದಿಂದ ಅಧಿಕಾರ ಸಿಕ್ಕಿದೆ. ಮುಂದೆ ಹೋರಾಟದ ದಾರಿ, ವ್ಯಾಖ್ಯಾನಗಳು ಸ್ಪಷ್ಟವಾಗಿರಬೇಕಾಗಿದೆ. ನಮ್ಮ ವಿರೋಧಿಗಳು ಯಾರು? ಎಂಬುದು ಈವರೆಗೂ ತಿಳಿದು ಬಂದಿಲ್ಲ. ಅದನ್ನು ಮೊದಲು ಗುರುತಿಸಿಕೊಳ್ಳಬೇಕು. ಆ ನಿಟ್ಟಿನಲ್ಲಿ ಇಂದಿನಿಂದಲೇ ಎಲ್ಲ ಜಿಲ್ಲೆಯಲ್ಲೂ ಕಾರ್ಯಾಗಾರಗಳನ್ನು ಮಾಡಲಾಗುವುದು. ಅಲ್ಪಸಂಖ್ಯಾತರು, ಹಿಂದುಳಿದವರು ಮತ್ತು ದಲಿತರು ಇಷ್ಟು ದೊಡ್ಡ ಶಕ್ತಿ ಇದೆ. ವಿರೋಧಿಗಳನ್ನು ಪತ್ತೆ ಹಚ್ಚಿದರೆ ಎಲ್ಲವೂ ಸರಿಯಾಗುತ್ತದೆ ಎಂದರು.ಭಾರತದ ಮೂಲ ನಿವಾಸಿಗಳು ಸೌಲಭ್ಯಕ್ಕಾಗಿ ಬೇಡುವ ಪರಿಸ್ಥಿತಿ ಬಂದಿದೆ. ಹೀಗಾಗಿ ನಮ್ಮ ಹೋರಾಟ ತಾರ್ಕಿಕ ಅಂತ್ಯರಾಜ್ಯ ಮಟ್ಟದ ವಿಚಾರ ಸಂಕಿರಣ

ತಲುಪುವ ನಿಟ್ಟಿನಲ್ಲಿ ಅಹಿಂದ ಕ್ರಾಂತಿ ರಾಜ್ಯದಲ್ಲಿ ನಡೆಯಲಿದೆ. ಎಲ್ಲ ಅಹಿಂದ ವರ್ಗದವರು ತಮ್ಮ ಪರವಾಗಿದ್ದಾರೆ ಎಂದು ಕೆಲವು ರಾಜಕಾರಣಿಗಳು ತಪ್ಪು ತಿಳಿದಿದ್ದಾರೆ. ಪರಿಸ್ಥಿತಿ ಹಾಗಿಲ್ಲ, ಗಂಭೀರವಾಗಿದೆ. ಅವರ ಸಮಸ್ಯೆ ಅರಿತು, ಪರಿಹಾರ ನೀಡಬೇಕು. ಇಲ್ಲದಿದ್ದರೆ ಅವರು ನಮ್ಮಿಂದ ದೂರವಾಗುತ್ತಾರೆ. ಸರ್ಕಾರ ಮತ್ತು ಅಹಿಂದ ಸೇತುವೆಯಾಗಿ ಕೆಲಸ ಮಾಡಬೇಕು ಎಂದು ಎಚ್ಚರಿಸಿದರು.


ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ, ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್, ಪ್ರೊ. ಪ್ರದೀಪ ರಾಮಾವತ್, ಡಾ. ರಾಜಾ ನಾಯಕ, ಚಂದ್ರಶೇಖರ, ದಾನಪ್ಪ ಕಬ್ಬೇರ, ಕೆ.ಎಂ.ರಾಮಚಂದ್ರಪ್ಪ, ಪಾಂಡುರಂಗ ಪಮ್ಮಾರ, ಶಾಸಕ ಯಾಸೀರಖಾನ್ ಪಠಾಣ, ವಿಧಾನ ಪರಿಷತ್ ಸದಸ್ಯ ಎಫ್.ಎಚ್. ಜಕ್ಕಪ್ಪನವರ, ರಾಹುಲ್ ಜಾರಕಿಹೊಳಿ. ವಿನೋದ ಅಸೂಟಿ, ಬಸವರಾಜ ಹಾದಿಮನಿ, ಅಲ್ತಾಫ್ ಕಿತ್ತೂರ, ಗುರುನಾಥ ಉಳ್ಳಿಕಾಶಿ, ಚಂದ್ರಶೇಖರ ಜುಟ್ಟಲ್, ತವನಪ್ಪ ಅಷ್ಟಗಿ, ಪ್ರೇಮನಾಥ ಚಿಕ್ಕತುಂಬಳ, ಅನಂತ ನಾಯಿಕ, ಲಕ್ಷ್ಮಣರಾವ್ ಚಿಂಗಳಿ, ರಾಜು ಅಲಗೂರ, ಆದರ್ಶ ಯಲ್ಲಪ್ಪಾ ಸೇರಿದಂತೆ ನೂರಾರು ಜನರು ಇದ್ದರು.

# ರಾಘವ್ ಛಡ್ಡಾ ಸೇರಿದಂತೆ 7 ಸದಸ್ಯರ ಬಿಜೆಪಿ ಸೇರ್ಪಡೆಗೆ-ಮೇಲ್ಮನೆಯಲ್ಲಿ 3ಕ್ಕೆ ಇಳಿದ ಆಪ್ ಸದಸ್ಯರ ಬಲ

**ನವದೆಹಲಿ,ಏ.27**–ಆಮ್ ಆದ್ಮಿ ಪಕ್ಷ ತೊರೆದು ಬಿಜೆಪಿ ಸೇರಿದ್ದ ರಾಘವ್ ಛಡ್ಡಾ ಸೇರಿದಂತೆ ಆಪ್‌ನ ಇತರೆ ಆರು ರಾಜ್ಯಸಭಾ ಸದಸ್ಯರ ಸೇರ್ಪಡೆಗೆ ರಾಜ್ಯಸಭಾ ಅಧ್ಯಕ್ಷ ಸಿಪಿ ರಾಧಕೃಷ್ಣನ್ ಸಮ್ಮತಿ ನೀಡಿದ್ದಾರೆ. ಈ ಮೂಲಕ ರಾಜ್ಯಸಭೆಯಲ್ಲಿ ಬಿಜೆಪಿಯ ಸದಸ್ಯರ ಬಲ 113ಕ್ಕೆ ಏರಿದೆ.

ಎಎಪಿಯ ಎರಡನೇ ಮೂರರಷ್ಟು ಸಂಸದರು ಪಕ್ಷ ತೊರೆದಿದ್ದು, ಇದರಿಂದಾಗಿ ಸಂಸತ್ ಮೇಲ್ಮನೆಯಲ್ಲಿ ಆಮ್ ಆದ್ಮಿ ಪಕ್ಷದ ಸಂಖ್ಯಾ ಬಲ 3ಕ್ಕೆ ಕುಸಿದಿದೆ.

ಸಂಸದರನ್ನು ರಾಜ್ಯಸಭೆಯಲ್ಲಿ ವಿಲೀನಗೊಳಿಸಿದ ಪ್ರಕ್ರಿಯೆಗೆ ಹರ್ಷ ವ್ಯಕ್ತಪಡಿಸಿ ಪೋಸ್ಟ್ ಮಾಡಿರುವ ಸಂಸದೀಯ ಸಚಿವ ಕಿರಣ್ ರಿಜಿಜು, ರಾಜ್ಯಸಭೆಯ ಅಧ್ಯಕ್ಷ ಸಿ.ಪಿ. ರಾಧಾಕೃಷ್ಣನ್ ಬಿಜೆಪಿಯೊಂದಿಗೆ 7 ಆಪ್ ಸಂಸದರ ಸೇರ್ಪಡೆಗೆ ಸಮ್ಮತಿಸಿದ್ದಾರೆ. ಈಗ, ರಾಘವ್ ಛಡ್ಡಾ, ಸಂದೀಪ್ ಪಾಠಕ್, ಅಶೋಕ್ ಮಿತ್ತಲ್, ಹರ್ಭಜನ್ ಸಿಂಗ್, ಸ್ವಾತಿ ಮಲಿವಾಲ್, ರಾಜಿಂದರ್ ಗುಪ್ತಾ ಮತ್ತು ವಿಕ್ರಮಜಿತ್ ಸಿಂಗ್ ಸಾಹ್ನಿ ಬಿಜೆಪಿ ಸಂಸದೀಯ ಪಕ್ಷದ ಸದಸ್ಯರಾಗಿದ್ದಾರೆ ಎಂದು ತಿಳಿಸಿದರು.



ಎಪ್ರಿಲ್ 24ರಂದು ಶುಕ್ರವಾರ ದೆಹಲಿಯಲ್ಲಿ ಮಾಧ್ಯಮಗೋಷ್ಠಿ ನಡೆಸಿ ಮಾತನಾಡಿದ್ದ ರಾಜ್ಯಸಭಾ ಸದಸ್ಯರಾದ ರಾಘವ್ ಛಡ್ಡಾ, ಸಂದೀಪ್ ಪಾಠಕ್ ಮತ್ತು ಅಶೋಕ್ ಮಿತ್ತಲ್ ಎಎಪಿ ತೊರೆದು ಬಿಜೆಪಿ ಸೇರಿದ್ದರು. ಇವರ ಜೊತೆಗೆ ಹರ್ಭಜನ್ ಸಿಂಗ್, ರಾಜಿಂದರ್ ಗುಪ್ತಾ ವಿಕ್ರಂಜಿತ್ ಸಿಂಗ್ ಸಾಹ್ನಿ ಮತ್ತು ಸ್ವಾತಿ ಮಲಿವಾಲ್ ಕೂಡ ಬಿಜೆಪಿ ಸೇರಿದ್ದರು.

ಈ ಬೆಳವಣಿಗೆ ಬೆನ್ನಲ್ಲೇ ಈ ಏಳು ಸಂಸದರನ್ನು ರಾಜ್ಯಸಭೆಯಿಂದ ಅನರ್ಹಗೊಳಿಸುವಂತೆ ಎಎಪಿ ಸಂಸದ ಸಂಜಯ್ ಸಿಂಗ್ ರಾಜ್ಯಸಭಾ ಚೇರ್ಮನ್ ಸಿಪಿ ರಾಧಕೃಷ್ಣನ್ ಅವರಿಗೆ ಕೋರಿದ್ದರು. ಸಂವಿಧಾನದ ಹತ್ತನೇ ವೇಳಾಪಟ್ಟಿಯ ಪ್ಯಾರಾಗ್ರಾಫ್ 4 ರ ಅಡಿಯಲ್ಲಿ ಉದ್ದೇಶಿತ ಸೇರ್ಪಡೆಯನ್ನು ಅರ್ಜಿ ಮೂಲಕ ಪ್ರಶ್ನಿಸಿದ್ದು, ಅದರ ಪ್ಯಾರಾಗ್ರಾಫ್ 2(1)(ಎ) ಅಡಿಯಲ್ಲಿ ಸದಸ್ಯರನ್ನು ಅನರ್ಹಗೊಳಿಸುವಂತೆ ಕೋರಿದ್ದರು.

ಇದೀಗ ಸಿಂಗ್, ಸಂವಿಧಾನದಲ್ಲಿನ ಅವಶ್ಯಕತೆಗಳನ್ನು ಉಲ್ಲೇಖಿಸಿ ವಿಲೀನಗೊಳಿಸಿರುವ ಸಿಂಧುತ್ವವನ್ನು ಪ್ರಶ್ನಿಸಿದ್ದಾರೆ.

ಆದಾಗ್ಯೂ, ಹತ್ತನೇ ವೇಳಾಪಟ್ಟಿಯ ಪ್ರಕಾರ, ಮೂಲ ರಾಜಕೀಯ ಪಕ್ಷವು ಮತ್ತೊಂದು ರಾಜಕೀಯ ಪಕ್ಷದೊಂದಿಗೆ ಸೇರ್ಪಡೆಗೊಂಡರೆ ಸಂಸದರ ಅನರ್ಹತೆ ನಡೆಯಲು ಸಾಧ್ಯವಿಲ್ಲ. ಏಕೆಂದರೆ ವಿಲೀನವು ಮೂರನೇ ಎರಡರಷ್ಟು ಸದಸ್ಯರನ್ನು ಒಳಗೊಂಡಿದೆ. ಏಳು ಎಎಪಿ ಸಂಸದರು ಬಿಜೆಪಿಯೊಂದಿಗೆ ಸೇರುವ ಷರತ್ತನ್ನು ಪೂರೈಸಿದೆ.

1958ರಲ್ಲಿ ಸಂವಿಧಾನದ ಹತ್ತನೇ ವೇಳಾಪಟ್ಟಿ 52ನೇ ತಿದ್ದುಪಡಿಯ ಪ್ರಕಾರ, ಸದಸ್ಯರು ಪಕ್ಷಾಂತರ ಮಾಡುವಂತಿಲ್ಲ. ಆದಾಗ್ಯೂ, ಈ ಸೇರ್ಪಡೆ ಅಪವಾದವಾಗಿದೆ. ಈ ಕ್ರಮವನ್ನು ಎಎಪಿ ನಾಯಕರು ದ್ರೋಹ ಎಂದಿದ್ದರೆ, ಬಿಜೆಪಿ ಇದನ್ನು ಸ್ವಾಗತಿಸಿದೆ.

# ಮೂಡಿಗೆರೆ: ಅಪಘಾತದಲ್ಲಿ ಗಾಯಗೊಂಡವರನ್ನು ತಮ್ಮ ಕಾರಲ್ಲೇ ಆಸ್ಪತ್ರೆಗೆ ದಾಖಲಿಸಿದ ಶಾಸಕಿ ನಯನಾ ಮೋಟಮ್ಮ



**ಚಿಕ್ಕಮಗಳೂರು,ಏ.27**–ಜಿಲ್ಲೆಯ ಮೂಡಿಗೆರೆ ತಾಲೂಕಿನ ನಿಡುವಾಳೆ ಬಳಿ ಸಂಭವಿಸಿದ ಭೀಕರ ಕಾರು ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಇಬ್ಬರು ಯುವಕರನ್ನು ತಮ್ಮ ಕಾರಿನಲ್ಲೇ ಆಸ್ಪತ್ರೆಗೆ ದಾಖಲಿಸಿ ಶಾಸಕಿ ನಯನಾ ಮೋಟಮ್ಮ ಮಾನವೀಯತೆ ಮೆರೆದಿದ್ದಾರೆ.

ಭಾನುವಾರ ನಿಯಂತ್ರಣ ತಪ್ಪಿದ ಕಾರೊಂದು ರಸ್ತೆ ಪಕ್ಕದ ಮರಕ್ಕೆ ವೇಗವಾಗಿ ಡಿಕ್ಕಿ ಹೊಡೆದ ಪರಿಣಾಮ ಈ ಅಪಘಾತ ಸಂಭವಿಸಿತ್ತು. ಡಿಕ್ಕಿಯ ತೀವ್ರತೆಗೆ ಕಾರಿನಲ್ಲಿದ್ದ ಇಬ್ಬರು ಯುವಕರು ತೀವ್ರ ರಕ್ತಸ್ರಾವಕ್ಕೊಳಗಾಗಿ ಗಂಭೀರ ವಾಗಿ ಗಾಯಗೊಂಡಿದ್ದರು.ಅದೇ ಸಮಯದಲ್ಲಿ ಹೊರನಾಡಿನಿಂದ ಮೂಡಿಗೆರೆ ಕಡೆಗೆ ಪ್ರಯಾಣಿಸುತ್ತಿದ್ದ ಶಾಸಕಿ ನಯನಾ ಮೋಟಮ್ಮ ಅವರು ಅಪಘಾತವನ್ನು ಕಂಡು ಕೂಡಲೇ ವಾಹನ ನಿಲ್ಲಿಸಿದ್ದಾರೆ.

ಪರಿಸ್ಥಿತಿಯ ಗಂಭೀರತೆಯನ್ನು ಅರಿತ ಅವರು, ಕ್ಷಣವೂ ತಡಮಾಡದೆ ತಮ್ಮ ಅಂಗ ರಕ್ಷಕರ ಸಹಾಯದಿಂದ ಗಾಯಾಳುಗಳನ್ನು ತಮ್ಮದೇ ಕಾರಿನಲ್ಲಿ ಹತ್ತಿಸಿಕೊಂಡು ಆಸ್ಪತ್ರೆಗೆ ಧಾವಿಸಿದ್ದಾರೆ. ಗಾಯಾಳುಗಳನ್ನು ಬಣಕಲ್‌ನ ಕೃಷ್ಣ ಆಸ್ಪತ್ರೆಗೆ ದಾಖಲಿಸಿ, ಪ್ರಥಮ ಚಿಕಿತ್ಸೆಗೆ ವ್ಯವಸ್ಥೆ ಮಾಡಿದ್ದಾರೆ. ಗಾಯಾಳುಗಳ ಮೈಯಿಂದ ಅತಿಯಾದ ರಕ್ತಸ್ರಾವವಾಗುತ್ತಿದ್ದ ಕಾರಣ ಶಾಸಕರ ಅಧಿಕೃತ ಕಾರು ಸಂಪೂರ್ಣ ರಕ್ತಮಯವಾಗಿತ್ತು. ಆದರೂ ಶಿಷ್ಟಾಚಾರ ಅಥವಾ ವಾಹನದ ಬಗ್ಗೆ ಯೋಚಿಸದೆ, ಜೀವ ಮುಖ್ಯ ಎಂದು ಶಾಸಕರು ತೋರಿದ ಈ ಕಾಳಜಿ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ. ಅಪಘಾತದಿಂದ ಗಾಯಗೊಂಡಿದ್ದ ಹಾರ್ಮಕ್ಕಿಯ ಪ್ರಫುಲ್ ಹಾಗೂ ಕಿರಣ್ ಅವರ ಸ್ಥಿತಿ ಚಿಂತಾಜನಕವಾಗಿದ್ದರಿಂದ ವೈದ್ಯರ ಸಲಹೆಯಂತೆ ಹೆಚ್ಚಿನ ಚಿಕಿತ್ಸೆಗಾಗಿ ಅವರನ್ನು ಮಂಗಳೂರಿನ ಆಸ್ಪತ್ರೆಗೆ ರವಾನಿಸಲಾಗಿದೆ. ಸಂಕಷ್ಟದ ಸಮಯದಲ್ಲಿ ಶಾಸಕಿ ತೋರಿದ ಸಮಯ ಪ್ರಜ್ಞೆ ಮತ್ತು ಮಾನವೀಯ ಗುಣಕ್ಕೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಪ್ರಶಂಸೆ ವ್ಯಕ್ತವಾಗುತ್ತಿದೆ. ಈ ಕುರಿತು ಬಣಕಲ್ ಪೊಲೀಸ್ ಠಾಣೆಯ ಠಾಣಾಧಿಕಾರಿ ಪ್ರತಿಕ್ರಿಯೆ ನೀಡಿದ್ದು, ಟಿಮೂಡಿಗೆರೆ ತಾಲೂಕಿನ ನೀಡುವಾಳೆ ಸಮೀಪ ಚಾಲಕನ ನಿಯಂತ್ರಣ ತಪ್ಪಿ ಕಾರೊಂದು ಮರಕ್ಕೆ ಗುದ್ದಿದೆ. ಕಾರಿನಲ್ಲಿ ಮೂರು ಜನರು ಪ್ರಯಾಣ ಮಾಡುತ್ತಿದ್ದರು. ಮೂವರು ಗೋಣಿಬೀಡು ಭಾಗದವರು. ಹೊರನಾಡು ಭಾಗದಿಂದ ಇದೇ ರಸ್ತೆಯಲ್ಲಿ ಬರುತ್ತಿದ್ದ ಶಾಸಕಿ ನಯನ ಮೋಟಮ್ಮ ಅವರು ಈ ಘಟನೆಯನ್ನು ನೋಡಿದ ಕೂಡಲೇ ಇಬ್ಬರನ್ನೂ ತಮ್ಮ ಕಾರಿನಲ್ಲಿಯೇ ಅಂಗರಕ್ಷಕರ ಸಹಾಯದಿಂದ ಖಾಸಗಿ ಆಸ್ಪತ್ರೆಗೆ ತಂದು ಸೇರಿಸಿ, ಪ್ರಾಥಮಿಕ ಚಿಕಿತ್ಸೆಯನ್ನು ಕೊಡಿಸಿದ್ದಾರೆ. ನಂತರ ಇಬ್ಬರ ಸ್ಥಿತಿ ಗಂಭೀರವಾದ ಕಾರಣ ಇಬ್ಬರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿಗೆ ರವಾನೆ ಮಾಡಲಾಗಿದೆ. ಈ ಕುರಿತು ಯಾವುದೇ ಪ್ರಕರಣ ದಾಖಲಾಗಿಲ್ಲ. ಸೋಮವಾರ ಪ್ರಕರಣ ದಾಖಲಾಗುವ ಸಾಧ್ಯತೆ ಇದೆ ಎಂದು ಹೇಳಿದ್ದಾರೆ.

# ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭದ್ರತಾ ಲೋಪ ಪ್ರಕರಣಕ್ಕೆ ಟ್ವಿಸ್ಟ್: ಸಂಸ್ಥೆಯ ಮೇಲಿನ ಕೋಪಕ್ಕೆ ಸಿಬ್ಬಂದಿಗಳಿಂದಲೇ ಕೃತ್ಯ

**ಬೆಂಗಳೂರು,ಏ.27**–ಐಪಿಎಲ್ ಪಂದ್ಯಗಳ ವೇಳೆ ಭದ್ರತೆ ನಿರ್ವಹಣೆಗಾಗಿ ಎಂ.ಚಿನ್ನಸ್ವಾಮಿ ಸ್ಟೇಡಿಯಂ ನಲ್ಲಿ ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾಗಳ ಸಂಪರ್ಕ ಕಡಿತಗೊಳಿಸುವ ಮೂಲಕ ಆತಂಕ ಸೃಷ್ಟಿಸಿದ್ದ ಇಬ್ಬರು ಆರೋಪಿಗಳನ್ನ ಕಬ್ಬನ್ ಪಾರ್ಕ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸಿಸಿಟಿವಿ ಕ್ಯಾಮೆರಾಗಳ ನಿರ್ವಹಣೆಯ ಜವಾಬ್ದಾರಿ ವಹಿಸಿಕೊಂಡಿದ್ದ ಉಪವಿತರಕ ಸಂಸ್ಥೆಯ ಸಿಬ್ಬಂದಿಗಳಾದ ಮಂಜುನಾಥ್.ಇ ಹಾಗೂ ಅಬ್ದುಲ್ ಕಲಾಂ ಬಂಧಿತರು. ಆರೋಪಿಗಳನ್ನ ವಿಚಾರಣೆಗೊಳಪಡಿಸಿದಾಗ ಕೃತ್ಯದ ಹಿಂದೆ ತೀರಾ ವೈಯಕ್ತಿಕ ಹಾಗೂ ವಿಚಿತ್ರ ಕಾರಣವಿರುವುದು ಬಹಿರಂಗವಾಗಿದೆ. ಎಪ್ರಿಲ್ 24ರಂದು ನಡೆದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಗುಜರಾತ್ ಟೈಟಾನ್ಸ್ ನಡುವಿನ ಪಂದ್ಯದ ದಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭದ್ರತೆಯ ಮೇಲ್ವಿಚಾರಣೆಗಾಗಿ ಅಳವಡಿಸಲಾಗಿದ್ದ 240 ಸಿಸಿಟಿವಿ ಕ್ಯಾಮೆರಾಗಳ ಫೀಡ್ ಏಕಾಏಕಿ ಆಫ್ ಆಗಿತ್ತು. ಪಂದ್ಯಕ್ಕೆ ಕೆಲವೇ ಗಂಟೆಗಳು ಬಾಕಿಯಿರುವಾಗ ಇದ್ದಕ್ಕಿದ್ದಂತೆ ಸಿಸಿಟಿವಿ ಕ್ಯಾಮೆರಾಗಳಲ್ಲಿ ಲೋಪವಾಗಿರುವುದು ಪೊಲೀಸರ ತೀವ್ರ ಆತಂಕಕ್ಕೆ ಕಾರಣವಾಗಿತ್ತು. ಪರಿಶೀಲನೆ ನಡೆಸಿದಾಗ ಇದು ತಾಂತ್ರಿಕ ದೋಷವಲ್ಲ, ಬದಲಾಗಿ ವ್ಯವಸ್ಥಿತವಾಗಿ ನಡೆದ ದುಷ್ಕೃತ್ಯ ಎಂಬುದು ಬಯಲಾಗಿತ್ತು.

ಸಂಸ್ಥೆಯ ಮೇಲಿನ ಸಿಟ್ಟಿಗೆ ಕೃತ್ಯ: ಆರೋಪಿಗಳನ್ನ ಬಂಧಿಸಿ ವಿಚಾರಣೆ ನಡೆಸಿದಾಗ ತಮ್ಮ ಸಂಸ್ಥೆಯ ಮೇಲಿನ ಸಿಟ್ಟಿಗೆ ಈ ರೀತಿ ಕೃತ್ಯ ಎಸಗಿರುವುದಾಗಿ ಆರೋಪಿಗಳು ಬಾಯ್ಬಿಟ್ಟಿದ್ದಾರೆ. ಸಿಸಿಟಿವಿ ಕ್ಯಾಮೆರಾಗಳ ನಿರ್ವಹಣೆಯಯನ್ನ **IVS Digital Solutions** ಎಂಬ ಉಪವಿತರಕ ಸಂಸ್ಥೆಗೆ ನೀಡಲಾಗಿತ್ತು. ಕಂಪನಿಯಿಂದ ಬರಬೇಕಿದ್ದ ವೇತನ ಬಾಕಿಯಿದ್ದುದರಿಂದ ಕೋಪದಿಂದ ಕೃತ್ಯ ಎಸಗಿರುವುದಾಗಿ ಆರೋಪಿಗಳು ಬಾಯ್ಬಿಟ್ಟಿದ್ದಾರೆ.ಪಂದ್ಯದ ದಿನ ತಮ್ಮ ಬಳಿಯಿದ್ದ ನಿಷ್ಕ್ರಿಯಗೊಂಡ ಹಳೆಯ ಐಡಿ ಕಾರ್ಡ್‌ಗಳನ್ನು ಬಳಸಿ ಕ್ರೀಡಾಂಗಣದೊಳಗೆ ಪ್ರವೇಶಿಸಿದ್ದಾರೆ. ನಂತರ ನೇರವಾಗಿ ಸಿಸಿಟಿವಿ ಸರ್ವರ್ ರೂಂಗೆ ತೆರಳಿ ಅಲ್ಲಿನ ಮತ್ತು ಫೈಬರ್ ಕನೆಕ್ಷನ್‌ಗಳನ್ನು ಕಡಿತಗೊಳಿಸಿದ್ದರು. ಇದರಿಂದ ಪ್ರವೇಶ ದ್ವಾರಗಳ ಕ್ಯಾಮೆರಾಗಳು, ಕ್ರೀಡಾಂಗಣದ ಸುತ್ತಮುತ್ತಲಿನ ಕ್ಯಾಮೆರಾಗಳು, ಡಿ ಕಾರ್ಪೊರೇಟ್ ಸ್ಟ್ಯಾಂಡ್ ಮತ್ತಿತರ ಭಾಗಗಳ ದೃಶ್ಯಾವಳಿಗಳ ಫೀಡ್ ಸ್ಥಗಿತವಾಗಿತ್ತು. ಸಿಸಿಟಿವಿ ದೃಶ್ಯಗಳು ಬಂದ್ ಆಗಿದ್ದರಿಂದ ಭದ್ರತಾ ಮೇಲ್ವಿಚಾರಣೆಯಲ್ಲಿ ಭಾರೀ ಹಿನ್ನಡೆಯಾಗಿತ್ತು. ಆದರೂ ಪಟ್ಟುಬಿಡದ ಪೊಲೀಸರು, ವಿಷಯ ತಿಳಿಯುತ್ತಿದ್ದಂತೆಯೇ ಮೇಲಾಧಿಕಾರಿಗಳಿಗೆ ಮಾಹಿತಿ ರವಾನಿಸಿ, ತಕ್ಷಣವೇ ಪರ್ಯಾಯ ವ್ಯವಸ್ಥೆಗಳನ್ನು ಸಿದ್ಧಪಡಿಸಿ ಪಂದ್ಯದ ಭದ್ರತೆ ನಿರ್ವಹಿಸುವಲ್ಲಿ ಯಶಸ್ವಿಯಾಗಿದ್ದರು.

ಬೆಂಗಳೂರಲ್ಲಿ ಮೈದಾನದ ಸುತ್ತಮುತ್ತ ಸಂಚಾರ ವ್ಯವಸ್ಥೆಯಲ್ಲಿ ಬದಲಾವಣೆ : ಇತ್ತೀಚಿಗೆ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಲಕ್ನೋ ಸೂಪರ್‌ಜೈಂಟ್ಸ್ ತಂಡಗಳ ನಡುವೆ ಐಪಿಎಲ್ ಪಂದ್ಯ ನಡೆದಿದ್ದರಿಂದಾಗಿ ಸಾರ್ವಜನಿಕರ ಸುಗಮ ಸಂಚಾರದ ದೃಷ್ಟಿಯಿಂದ ಮೈದಾನದ ಸುತ್ತಮುತ್ತ ಸಂಚಾರ ವ್ಯವಸ್ಥೆಯಲ್ಲಿ ಕೆಲ ಮಾರ್ಪಾಡುಗಳನ್ನು ಮಾಡಲಾಗಿತ್ತು.

# ಧಾರವಾಡ : ಏ.28,29,30ರಂದು ಎಸ್‌ಡಿ.ಎಂ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸೃಷ್ಟಿ ಇನ್ನೋವೇಶನ್ ಎಕ್ಸೆಚೇಂಜ್

■ ಕನ್ನಡ ಮಾತೃ ಭೂಮಿ ವಾರ್ತೆ

ಎಬಿವಿಪಿ , ಎಸ್ ಡಿ ಎಮ್ ಇಂಜಿನಿಯರಿಂಗ್ ಕಾಲೇಜ್ , ವಿಟಿಯು , ಯುವಕ ಸಂಘದ ಸಯೋಗದಲ್ಲಿ ಏಪ್ರಿಲ್ 28 29 30ರಂದು ನಡೆಯುತ್ತಿರುವ ರಾಜ್ಯಮಟ್ಟದ ಟಿಸೃಷ್ಟಿ ಇನ್ನೋವೇಶನ್ ಎಕ್ಸೆಚೇಂಜ್ ಕಾರ್ಯಕ್ರಮದ ಕುರಿತು ಧಾರವಾಡದಲ್ಲಿ ಇಂದು ಎಬಿವಿಪಿಯ ರಾಜ್ಯ ಕಾರ್ಯದರ್ಶಿ ದರ್ಶನ್ ಹೆಗಡೆ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದರು,ಟೆಕ್ನಿಕಲ್ ವಿದ್ಯಾರ್ಥಿಗಳಿಗಾಗಿ ಪ್ರತಿ ವರ್ಷ ಕರ್ನಾಟಕದಲ್ಲಿ ನಡೆಯುವ ಸೃಷ್ಟಿ ಇನ್ನೋವೇಶನ್ ಎಕ್ಸೆಚೇಂಜ್ ಅನೇಕ ವರ್ಷಗಳಿಂದ ಬೆಂಗಳೂರಿನಲ್ಲಿ ನಡೆಯುತ್ತಿದ್ದ.

ಈ ಕಾರ್ಯಕ್ರಮವನ್ನು ಉತ್ತರ ಕರ್ನಾಟಕದ ವಿದ್ಯಾರ್ಥಿಗಳ ಪ್ರತಿಭೆಗಳಿಗೆ ಹೆಚ್ಚಿನ ಅವಕಾಶವನ್ನು ಕಲ್ಪಿಸುವ ದೃಷ್ಟಿಯಿಂದ ಈ ಬಾರಿ ಧಾರವಾಡದ ಎಸ್.ಡಿ.ಎಂ ಇಂಜಿನಿಯರಿಂಗ್ ಕಾಲೇಜಿನಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ, ಕಾರ್ಯಕ್ರಮದಲ್ಲಿ 150ಕ್ಕೂ ಅಧಿಕ ಪ್ರಾಜೆಕ್ಟ್ ಗಳು ಪ್ರದರ್ಶನಗೊಳ್ಳಲಿದೆ , 12ಕ್ಕೂ ಅಧಿಕ ಸ್ಪರ್ಧೆಗಳಲ್ಲಿ 3,000 ಕ್ಕೂ ಅಧಿಕ ವಿದ್ಯಾರ್ಥಿಗಳು ,ಅಧ್ಯಾಪಕರು ಭಾಗವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು , ಕಲೆಯಲ್ಲಿ ಆಸಕ್ತಿ ಇರುವ ವಿದ್ಯಾರ್ಥಿಗಳಿಗೆ ಆರ್ಟ್ ಅಂಡ್ ಡಿಸೈನ್ ಸಮ್ಮಿಟ್ ಸ್ಪರ್ಧೆಗಳು ಕೂಡ ನಡೆಯಲಿದೆ , ಕಾರ್ಯಕ್ರಮದ ಉದ್ಘಾಟನೆ ನಾಳೆ ಏಪ್ರಿಲ್ 28 ರ ಮಧ್ಯಾಹ್ನ 3 ಗಂಟೆಗೆ ಎಸ್ ಡಿ ಎಂ ಇಂಜಿನಿಯರಿಂಗ್ ಕಾಲೇಜಿನ ಸಭಾಂಗಣದಲ್ಲಿ ನಡೆಯಲಿದೆ.

ಉದ್ಘಾಟನಾ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವರಾದ ಸನ್ಮಾನ್ಯ ಪ್ರಹ್ಲಾದ್ ಜೋಶಿ ಅವರು, ಎಬಿವಿಪಿಯ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿಗಳಾದ ಅಜಿತ್ ಚವಾಣ್ ಅವರು ,ಉದ್ಯಮಿಗಳಾದ ವಿಜಯ ನಿರಾಣಿ ಅವರು , ವಿಟಿಯು ಕುಲಪತಿಗಳಾದ ಎಸ್ ವಿದ್ಯಾಶಂಕರ ವರು , ಎಸ್ ಡಿ ಎಮ್ ಸಂಸ್ಥೆಯ ಸೆಕ್ರೆಟರಿಗಳಾದ ಜಿವೇಂದ್ರ ಕುಮಾರ್ ಅವರು, ಎಬಿಪಿಯ ರಾಜ್ಯಾಧ್ಯಕ್ಷರು ಹಾಗೂ ಅನೇಕ ಗಣ್ಯರು ಉಪಸ್ಥಿತರಿರಲಿದ್ದಾರೆ ಎಂದೂ ಹೇಳಿದರು, ಈ ಕಾರ್ಯಕ್ರಮವು ಪ್ರತಿಭೆಯನ್ನು ಹೊಂದಿರುವಂತ ವಿದ್ಯಾರ್ಥಿಗಳಿಗೆ ಉತ್ತಮ ವೇದಿಕೆಯನ್ನು ನೀಡುವ ಕಾರ್ಯಕ್ರಮವಾಗಿದೆ , ಕಾರ್ಯಕ್ರಮಕ್ಕೆ ಅನೇಕ ಉದ್ಯಮಿಗಳು , ಸ್ಟಾರ್ಟ್ ಅಪ್ ಸಂಸ್ಥಾಪಕರು ಭೇಟಿ ನೀಡಲಿದ್ದಾರೆ . ಕಾರ್ಯಕ್ರಮದ ಸಮಾರೋಪವು ಏಪ್ರಿಲ್ 30 ರಂದು 3 ಗಂಟೆಗೆ ನಡೆಯಲಿದೆ ಎಂದು ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಎಬಿಪಿಯ ಸವಿಸ್ಕಾರದ ರಾಜ್ಯ ಸಂಚಾಲಕರಾದ ದರ್ಶನ್ ವಡ್ರಳ್ಳಿ , ಸಹ ಸಂಚಾಲಕರಾದ ಅಥರ್ವ ಚೌಹಾಣ್ , ಚೇತನ್ ಕೊರವರ ಹಾಗೂ ವಿಜಯಲಕ್ಷ್ಮಿ ಮಾನೆ ಉಪಸ್ಥಿತರಿದ್ದರು. ಕಾರ್ಯಕ್ರಮ ಈ ಬಾರಿ ಧಾರವಾಡದಲ್ಲಿ ನಡೆಯುತ್ತಿದೆ .

# ನೆರೆಬೊಮ್ಮನಹಳ್ಳಿ : 40 ಮನೆಗಳಿಗೆ ಹಕ್ಕು ಪತ್ರ ವಿತರಣೆ



■ ಕನ್ನಡ ಮಾತೃ ಭೂಮಿ ವಾರ್ತೆ

**ಹರಪನಹಳ್ಳಿ,ಏ.27**–ಅನೇಕ ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಹಕ್ಕುಪತ್ರ ಇಲ್ಲದೆ ಸರ್ಕಾರಿ ಸೌಲಭ್ಯದಿಂದ ವಂಚಿತರಾಗಿದ್ದ ನಮ್ಮವರಿಗೆ ಸರ್ಕಾರದ ಈ ಯೋಜನೆಯಿಂದ ಅವರ ಕನಸು ನನಸಾಗಿದೆಟಿ ಎಂದು ಗ್ರಾ.ಪಂ ಮಾಜಿ ಸದಸ್ಯ ಬಂಡಿ ಶಶಿಕುಮಾರ್ ಅಭಿಪ್ರಾಯ ಪಟ್ಟರು.

ರಾಜ್ಯದಲ್ಲಿ ಮುಖ್ಯಮಂತ್ರಿ ನೇತೃತ್ವದಲ್ಲಿ ಹಕ್ಕು ಪತ್ರ ವಿತರಣೆಗೆ ಚಾಲನೆ ನೀಡಿದ್ದು,ಅದರಂತೆ ಹರಪನಹಳ್ಳಿಯಲ್ಲಿ ತಾಲ್ಲೂಕಿನ ಉಚ್ಚಂಗಿದುರ್ಗ ಸಮೀಪದ ನೆರೆಬೊಮ್ಮನಹಳ್ಳಿ ಗ್ರಾಮದ 40 ಮನೆಗಳ ಫಲಾನುಭವಿಗಳಿಗೆ ಹಕ್ಕು ಪತ್ರ ವಿತರಣೆ ಬಳಿಕ ಅವರು ಮಾತನಾಡಿದರು.

ಗ್ರಾಮಸ್ಥರಿಗೆ ಮೂಲಸೌಕರ್ಯ ಹಾಗೂ ಸರ್ಕಾರದ ಜಾರಿಯಲ್ಲಿರುವ

ಅನೇಕ ಯೋಜನೆಗಳನ್ನು ಜನರಿಗೆ ತಲುಪಿಸುವಲ್ಲಿ ಹಿರಿಯರ ಮಾರ್ಗದರ್ಶನ ಹಾಗೂ ಯುವಕರ ಸಲಹೆಯಂತೆ ಪ್ರಾಮಾಣಿಕ ಪ್ರಯತ್ನ

ಮಾಡಿದ್ದೇನೆಟಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮುಖಂಡರಾದ ನೆರೆಬೊಮ್ಮನಹಳ್ಳಿ ರಾಜಪ್ಪ,ಕುಮಾರ್,ಸುಭಾಶಪ್ಪ,ಲೋಕೇಶ್,ತಿಮ್ಮಶಪ್ಪ,ಸೇರಿದಂತೆ ಹಕ್ಕುಪತ್ರ ಫಲಾನುಭವಿಗಳು ಇದ್ದರು.

# ಹುಬ್ಬಳ್ಳಿ: ನಶಿಸುತ್ತಿರುವ ಕಂಚಗಾರಿಕೆ ವೃತ್ತಿ – ಮುಲ್ಲಾ ಓಣಿಯ ಕಾರ್ಮಿಕರ ಸಂಕಷ್ಟ





■ ಕನ್ನಡ ಮಾತೃ ಭೂಮಿ ವಾರ್ತೆ

**ಹುಬ್ಬಳ್ಳಿ,ಏ.27**–ನಗರದ ಮುಲ್ಲಾ ಓಣಿಯ ಮುಖ್ಯ ರಸ್ತೆಯಲ್ಲಿ ನೀವು ಸಂಚರಿಸುವಾಗ ಕೇಳಿಬರುವ ಕಟ್ಟ... ಕಟ್ಟ... ಎಂಬ ಶಬ್ದದ ಹಿಂದೆ ಒಂದು ಶತಮಾನ ಹಳೆಯ ಇತಿಹಾಸ ಅಡಗಿದೆ. ಇಲ್ಲಿ ನಡೆಯುತ್ತಿರುವ ಕಂಚಗಾರಿಕೆ (ತಾಮ್ರದ ಪಾತ್ರೆ ಚಮ್ಮಕಾಯಿಸುವ) ಕೆಲಸವು ಸುಮಾರು 100 ವರ್ಷಗಳ ಪರಂಪರೆಯನ್ನು ಹೊಂದಿದೆ.

ಒಂದು ಕಾಲದಲ್ಲಿ 30ರಿಂದ 40 ಕುಟುಂಬಗಳು ಈ ವೃತ್ತಿಯನ್ನು ಅವಲಂಬಿಸಿಕೊಳ್ಳುತ್ತಿದ್ದವು. ಆದರೆ ಕಾಲಕ್ರಮೇಣ ಮಾರುಕಟ್ಟೆಯಲ್ಲಿ ಬೇಡಿಕೆ ಕುಸಿತ ಮತ್ತು ಆಧುನಿಕ ಉಪಕರಣಗಳ ಬಳಕೆಯಿಂದಾಗಿ ಈಗ ಕೇವಲ ಎರಡು ಕುಟುಂಬಗಳು ಮಾತ್ರ ಈ ಪರಂಪರೆಯ ವೃತ್ತಿಯನ್ನು ಮುಂದುವರಿಸುತ್ತಿವೆ.

ಈ ಕೆಲಸ ಬಹಳ ಕಠಿಣ ಮತ್ತು ಪರಿಶ್ರಮದಾಯಕವಾಗಿದೆ. ದಿನಪೂರ್ತಿ ಹೊಡೆತ, ಉರಿ ಮತ್ತು ಶ್ರಮದ ಮಧ್ಯೆ ಈ ಕಾರ್ಮಿಕರು ತಮ್ಮ ಜೀವನ ಸಾಗಿಸುತ್ತಿದ್ದಾರೆ.

ಡಆದರೂ, ಇಂತಹ ಪರಂಪರೆಯ ವೃತ್ತಿಜೀವಿಗಳಿಗೆ ಸರ್ಕಾರದಿಂದ ಯಾವುದೇ ವಿಶೇಷ ಯೋಜನೆಗಳು ಅಥವಾ ಸಹಾಯ ಸಿಗದಿರುವುದು ವಿಷಾದನೀಯ ಸಂಗತಿ.

ಇನ್ನೊಂದೆಡೆ, ಆರೋಗ್ಯದ ದೃಷ್ಟಿಯಿಂದ ತಾಮ್ರದ ಪಾತ್ರೆಗಳ ಬಳಕೆ ಮತ್ತೆ ಹೆಚ್ಚಬೇಕಿದೆ, ಜನರು ಹಳೆಯ ತಾಮ್ರದ ಪಾತ್ರೆಗಳನ್ನು ಚಮ್ಮಕಾಯಿಸಲು ಆಸಕ್ತಿ ತೋರಬಹುದು. ಇದರಿಂದ ಈ ವೃತ್ತಿಗೆ ಮತ್ತೆ ಜೀವ ತುಂಬುವ ಸಾಧ್ಯತೆ ಇದೆ ಎಂದು ಕಾರ್ಮಿಕರು ಆಶಿಸುತ್ತಿದ್ದಾರೆ.

# ...ಮೊದಲನೇ ಪುಟದಿಂದ

## ಮದುವೆಯಾಗುವುದಾಗಿ ನಂಬಿಸಿ ಯುವತಿಗೆ ಲೈಂಗಿಕ ದೌರ್ಜನ್ಯ ಆರೋಪ; ಯುವಕನ ವಿರುದ್ಧ ಪ್ರಕರಣ ದಾಖಲು

ನಂತರ ಪ್ರೀತಿಯ ನೆಪದಲ್ಲಿ ಆಕೆಯನ್ನು ನಂಬಿಸಿ ಪುಸಲಾ ಯಿಸಿದ್ದಾನೆ. ಈಗ ಮೋಸ ಮಾಡಿರುವುದಾಗಿ ದೂರು ದಾಖಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ. 2024ರ ಅಕ್ಟೋಬರ್ 1ರಂದು ಮಧ್ಯಾಹ್ನ ಲಿಂಗಸೂಗೂರು ಸಮೀಪದ ಇಟ್ಟಿಗೆ ಕಾರ್ಖಾನೆ ಬಳಿ ಕರೆದುಕೊಂಡು ಹೋಗಿ ಯುವತಿಯ ಇಚ್ಛೆಗೆ ವಿರುದ್ಧವಾಗಿ ಅತ್ಯಾಚಾರ ಎಸಗಿದ್ದಾನೆ. ನಂತರ ಮದುವೆಯಾಗುವ ಭರವಸೆ ನೀಡಿ ದೌರ್ಜನ್ಯ ಮುಂದುವರಿಸಿದ್ದಾನೆ ಎಂದು ಪ್ರಕರಣ ದಾಖಲಾಗಿರುವ ಬಗ್ಗೆ ಪೊಲೀಸರು ಹೇಳಿದ್ದಾರೆ. ಇದೇ ರೀತಿ, 2026ರ ಎಪ್ರಿಲ್ 22ರಂದು ಕಾಲೇಜಿನಿಂದ ಹೊರಬಂದ ಯುವತಿಯನ್ನು ಬಲವಂತವಾಗಿ ಬೈಕ್‌ನಲ್ಲಿ ಕರೆದೊಯ್ದು ಹಳೆಯ ಕ್ವಾರಿಯಲ್ಲಿ ಮತ್ತೆ ಅತ್ಯಾಚಾರ ಎಸಗಿದ್ದು, ವಿಷಯವನ್ನು ಯಾರಿಗಾದರು ತಿಳಿಸಿದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದಾನೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಈ ವಿಷಯವನ್ನು ಯುವತಿ ತನ್ನ ಮನೆಯವರಿಗೆ ತಿಳಿಸಿದ ಬಳಿಕ, ಎಪ್ರಿಲ್ 24ರಂದು ನಡೆದ ಮಾತುಕತೆಯಲ್ಲಿ ಆರೋಪಿಯು ತನ್ನ ತಾಯಿ ಹಾಗೂ ಸಂಬಂಧಿಕರಾದ ಕೃಷ್ಣ, ಅಶೋಕ್ ಅವರೊಂದಿಗೆ ಸೇರಿ ಯುವತಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ದೂರು ನೀಡಿದರೆ ಜೀವ ಹಾನಿ ಮಾಡುವುದಾಗಿ ಬೆದರಿಕೆ ಹಾಕಿದ್ದಾರೆ ಎಂಬುದಾಗಿ ಆರೋಪಿಸಲಾಗಿದೆ. ಸಂತ್ರಸ್ತೆಯ ದೂರಿನ ಮೇರೆಗೆ ಲಿಂಗಸೂಗೂರು ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದು, ಭಾರತೀಯ ನ್ಯಾಯ ಸಂಹಿತೆ (ಆಫೆಖ) ಸೆಕ್ಷನ್ 64(1), 352, 351(2) ಸೇರಿದಂತೆ ವಿವಿಧ ಕಲಂಗಳಡಿ ಎಫ್ ಐಆರ್ (ಸಂಖ್ಯೆ: 141/2026) ದಾಖಲಿಸಿಕೊಂಡು ಪೊಲೀಸರು ತನಿಖೆ ಮುಂದುವರೆಸಿದ್ದಾರೆ. ತನಗೆ ನ್ಯಾಯ ಕೊಡಿಸುವಂತೆ ಯುವತಿ ಮನವಿ ಮಾಡಿದ್ದು, ತಾಯಿ ನನ್ನ ಮಗಳಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸುವಂತೆ ಕೇಳಿಕೊಂಡಿದ್ದಾರೆ. ಕೊಡಗಿನ ಹೋಂಸ್ಟೇನಲ್ಲಿ ವಿದೇಶಿ ಮಹಿಳೆ ಮೇಲೆ ಲೈಂಗಿಕ ದೌರ್ಜನ್ಯ : ಇತ್ತೀಚಿಗೆ ಅಮೆರಿಕ ಮೂಲದ ಮಹಿಳೆ ಮೇಲೆ ಜಾರ್ಖಂಡ್ ಮೂಲದ ವ್ಯಕ್ತಿ ಹೋಂಸ್ಟೇನಲ್ಲಿ ಲೈಂಗಿಕ ದೌರ್ಜನ್ಯ ಎಸಗಿರುವ ಪ್ರಕರಣ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಕುಟ್ಟ ಎಂಬ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ವರದಿಯಾಗಿತ್ತು.

## ಅಪಘಾತದಲ್ಲಿ ಗಾಯಗೊಂಡವರನ್ನು ತಮ್ಮ ಕಾರಲ್ಲೇ ಆಸ್ಪತ್ರೆಗೆ ದಾಖಲಿಸಿದ ಶಾಸಕಿ ನಯನಾ ಮೋಟಮ್ಮ

ಗಂಭೀರ ವಾಗಿ ಗಾಯಗೊಂಡಿದ್ದರು.ಅದೇ ಸಮಯದಲ್ಲಿ ಹೊರನಾ ಡಿನಿಂದ ಮೂಡಿಗೆರೆ ಕಡೆಗೆ ಪ್ರಯಾಣಿಸುತ್ತಿದ್ದ ಶಾಸಕಿ ನಯನಾ ಮೋಟಮ್ಮ ಅವರು ಅಪಘಾತವನ್ನು ಕಂಡು ಕೂಡಲೇ ವಾಹನ ನಿಲ್ಲಿಸಿದ್ದಾರೆ.

ಪರಿಸ್ಥಿತಿಯ ಗಂಭೀರತೆಯನ್ನು ಅರಿತ ಅವರು, ಕ್ಷಣವೂ ತಡಮಾಡದೆ ತಮ್ಮ ಅಂಗ ರಕ್ಷಕರ ಸಹಾಯದಿಂದ ಗಾಯಾಳುಗಳನ್ನು ತಮ್ಮದೇ ಕಾರಿನಲ್ಲಿ ಹತ್ತಿಸಿಕೊಂಡು ಆಸ್ಪತ್ರೆಗೆ ಧಾವಿಸಿದ್ದಾರೆ.

ಗಾಯಾಳುಗಳನ್ನು ಬಣಕಲ್‌ನ ಕೃಷ್ಣ ಆಸ್ಪತ್ರೆಗೆ ದಾಖಲಿಸಿ, ಪ್ರಥಮ ಚಿಕಿತ್ಸೆಗೆ ವ್ಯವಸ್ಥೆ ಮಾಡಿದ್ದಾರೆ. ಗಾಯಾಳುಗಳ ಮೈಯಿಂದ ಅತಿಯಾದ ರಕ್ತಸ್ರಾವವಾಗುತ್ತಿದ್ದ ಕಾರಣ ಶಾಸಕರ ಅಧಿಕೃತ ಕಾರು ಸಂಪೂರ್ಣ ರಕ್ತಮಯವಾಗಿತ್ತು. ಆದರೂ ಶಿಷ್ಟಾಚಾರ ಅಥವಾ ವಾಹನದ ಬಗ್ಗೆ ಯೋಚಿಸದೆ, ಜೀವ ಮುಖ್ಯ ಎಂದು ಶಾಸಕರು ತೋರಿದ ಈ ಕಾಳಜಿ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ.

ಅಪಘಾತದಿಂದ ಗಾಯಗೊಂಡಿದ್ದ ಹಾರ್ಮಕ್ಕಿಯ ಪ್ರಫುಲ್ ಹಾಗೂ ಕಿರಣ್ ಅವರ ಸ್ಥಿತಿ ಚಿಂತಾಜನಕವಾಗಿದ್ದರಿಂದ ವೈದ್ಯರ ಸಲಹೆಯಂತೆ ಹೆಚ್ಚಿನ ಚಿಕಿತ್ಸೆಗಾಗಿ ಅವರನ್ನು ಮಂಗಳೂರಿನ ಆಸ್ಪತ್ರೆಗೆ ರವಾನಿಸಲಾಗಿದೆ. ಸಂಕಷ್ಟದ ಸಮಯದಲ್ಲಿ ಶಾಸಕಿ ತೋರಿದ ಸಮಯ ಪ್ರಜ್ಞೆ ಮತ್ತು ಮಾನವೀಯ ಗುಣಕ್ಕೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಪ್ರಶಂಸೆ ವ್ಯಕ್ತವಾಗುತ್ತಿದೆ.

ಈ ಕುರಿತು ಬಣಕಲ್ ಪೊಲೀಸ್ ಠಾಣೆಯ ಠಾಣಾಧಿಕಾರಿ ಈಟಿವಿ ಭಾರತಕ್ಕೆ ಪ್ರತಿಕ್ರಿಯೆ ನೀಡಿದ್ದು, ಮೂಡಿಗೆರೆ ತಾಲೂಕಿನ ನೀಡುವಾಳೆ ಸಮೀಪ ಚಾಲಕನ ನಿಯಂತ್ರಣ ತಪ್ಪಿ ಕಾರೊಂದು ಮರಕ್ಕೆ ಗುದ್ದಿದೆ. ಕಾರಿನಲ್ಲಿ ಮೂರು ಜನರು ಪ್ರಯಾಣ ಮಾಡುತ್ತಿದ್ದರು. ಮೂವರು ಗೋಣಿಬೀಡು ಭಾಗದವರು. ಹೊರನಾಡು ಭಾಗದಿಂದ ಇದೇ ರಸ್ತೆಯಲ್ಲಿ ಬರುತ್ತಿದ್ದ ಶಾಸಕಿ ನಯನ ಮೋಟಮ್ಮ ಅವರು ಈ ಘಟನೆಯನ್ನು ನೋಡಿದ ಕೂಡಲೇ ಇಬ್ಬರನ್ನೂ ತಮ್ಮ ಕಾರಿನಲ್ಲಿಯೇ ಅಂಗರಕ್ಷಕರ ಸಹಾಯದಿಂದ ಖಾಸಗಿ ಆಸ್ಪತ್ರೆಗೆ ತಂದು ಸೇರಿಸಿ, ಪ್ರಾಥಮಿಕ ಚಿಕಿತ್ಸೆಯನ್ನು ಕೊಡಿಸಿದ್ದಾರೆ. ನಂತರ ಇಬ್ಬರ ಸ್ಥಿತಿ ಗಂಭೀರವಾದ ಕಾರಣ ಇಬ್ಬರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿಗೆ ರವಾನೆ ಮಾಡಲಾಗಿದೆ. ಈ ಕುರಿತು ಯಾವುದೇ ಪ್ರಕರಣ ದಾಖಲಾಗಿಲ್ಲ. ಸೋಮವಾರ ಪ್ರಕರಣ ದಾಖಲಾಗುವ ಸಾಧ್ಯತೆ ಇದೆ ಎಂದು ಹೇಳಿದ್ದಾರೆ.

## ಸಂಸ್ಥೆಯ ಮೇಲಿನ ಕೋಪಕ್ಕೆ ಸಿಬ್ಬಂದಿಗಳಿಂದಲೇ ಕೃತ್ಯ

ಕಾರಣವಿರುವುದು ಬಹಿರಂಗವಾಗಿದೆ. ಎಪ್ರಿಲ್ 24ರಂದು ನಡೆದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಗುಜರಾತ್ ಟೈಟಾನ್ಸ್ ನಡುವಿನ ಪಂದ್ಯದ ದಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭದ್ರತೆಯ ಮೇಲ್ವಿಚಾರಣೆಗಾಗಿ ಅಳವಡಿಸಲಾಗಿದ್ದ 240 ಸಿಸಿಟಿವಿ ಕ್ಯಾಮೆರಾಗಳ ಫೀಡ್ ಏಕಾಏಕಿ ಆಫ್ ಆಗಿತ್ತು. ಪಂದ್ಯಕ್ಕೆ ಕೆಲವೇ ಗಂಟೆಗಳು ಬಾಕಿಯಿರುವಾಗ ಇದ್ದಕ್ಕಿದ್ದಂತೆ ಸಿಸಿಟಿವಿ ಕ್ಯಾಮೆರಾಗಳಲ್ಲಿ ಲೋಪವಾಗಿರುವುದು ಪೊಲೀಸರ ತೀವ್ರ ಆತಂಕಕ್ಕೆ ಕಾರಣವಾಗಿತ್ತು. ಪರಿಶೀಲನೆ ನಡೆಸಿದಾಗ ಇದು ತಾಂತ್ರಿಕ ದೋಷವಲ್ಲ, ಬದಲಾಗಿ ವ್ಯವಸ್ಥಿತವಾಗಿ ನಡೆದ ದುಷ್ಕೃತ್ಯ ಎಂಬುದು ಬಯಲಾಗಿತ್ತು.

ಸಂಸ್ಥೆಯ ಮೇಲಿನ ಸಿಟ್ಟಿಗೆ ಕೃತ್ಯ: ಆರೋಪಿಗಳನ್ನ ಬಂಧಿಸಿ ವಿಚಾರಣೆ ನಡೆಸಿದಾಗ ತಮ್ಮ ಸಂಸ್ಥೆಯ ಮೇಲಿನ ಸಿಟ್ಟಿಗೆ ಈ ರೀತಿ ಕೃತ್ಯ ಎಸಗಿರುವುದಾಗಿ ಆರೋಪಿಗಳು ಬಾಯ್ಬಿಟ್ಟಿದ್ದಾರೆ. ಸಿಸಿಟಿವಿ ಕ್ಯಾಮೆರಾಗಳ ನಿರ್ವಹಣೆಯಯನ್ನ **IVS Digital Solutions** ಎಂಬ ಉಪವಿತರಕ ಸಂಸ್ಥೆಗೆ ನೀಡಲಾಗಿತ್ತು. ಕಂಪನಿಯಿಂದ ಬರಬೇಕಿದ್ದ ವೇತನ ಬಾಕಿಯಿದ್ದುದರಿಂದ ಕೋಪದಿಂದ ಕೃತ್ಯ ಎಸಗಿರುವುದಾಗಿ ಆರೋಪಿಗಳು ಬಾಯ್ಬಿಟ್ಟಿದ್ದಾರೆ.

ಪಂದ್ಯದ ದಿನ ತಮ್ಮ ಬಳಿಯಿದ್ದ ನಿಷ್ಕ್ರಿಯಗೊಂಡ ಹಳೆಯ ಐಡಿ ಕಾರ್ಡ್‌ಗಳನ್ನು ಬಳಸಿ ಕ್ರೀಡಾಂಗಣದೊಳಗೆ ಪ್ರವೇಶಿಸಿದ್ದಾರೆ. ನಂತರ ನೇರವಾಗಿ ಸಿಸಿಟಿವಿ ಸರ್ವರ್ ರೂಂಗೆ ತೆರಳಿ ಅಲ್ಲಿನ ಮತ್ತು ಫೈಬರ್ ಕನೆಕ್ಷನ್‌ಗಳನ್ನು ಕಡಿತಗೊಳಿಸಿದ್ದರು. ಇದರಿಂದ ಪ್ರವೇಶ ದ್ವಾರಗಳ ಕ್ಯಾಮೆರಾಗಳು, ಕ್ರೀಡಾಂಗಣದ ಸುತ್ತಮುತ್ತಲಿನ ಕ್ಯಾಮೆರಾಗಳು, ಡಿ ಕಾರ್ಪೊರೇಟ್ ಸ್ಟ್ಯಾಂಡ್ ಮತ್ತಿತರ ಭಾಗಗಳ ದೃಶ್ಯಾವಳಿಗಳ ಫೀಡ್ ಸ್ಥಗಿತವಾಗಿತ್ತು. ಸಿಸಿಟಿವಿ ದೃಶ್ಯಗಳು ಬಂದ್ ಆಗಿದ್ದರಿಂದ ಭದ್ರತಾ ಮೇಲ್ವಿಚಾರಣೆಯಲ್ಲಿ ಭಾರೀ ಹಿನ್ನಡೆಯಾಗಿತ್ತು. ಆದರೂ ಪಟ್ಟುಬಿಡದ ಪೊಲೀಸರು, ವಿಷಯ ತಿಳಿಯುತ್ತಿದ್ದಂತೆಯೇ ಮೇಲಾಧಿಕಾರಿಗಳಿಗೆ ಮಾಹಿತಿ ರವಾನಿಸಿ, ತಕ್ಷಣವೇ ಪರ್ಯಾಯ ವ್ಯವಸ್ಥೆಗಳನ್ನು ಸಿದ್ಧ ಪಡಿಸಿ ಪಂದ್ಯದ ಭದ್ರತೆ ನಿರ್ವಹಿಸುವಲ್ಲಿ ಯಶಸ್ವಿಯಾಗಿದ್ದರು.

ಬೆಂಗಳೂರಲ್ಲಿ ಮೈದಾನದ ಸುತ್ತಮುತ್ತ ಸಂಚಾರ ವ್ಯವಸ್ಥೆಯಲ್ಲಿ ಬದಲಾವಣೆ : ಇತ್ತೀಚಿಗೆ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಲಕ್ನೋ ಸೂಪರ್‌ಜೈಂಟ್ಸ್ ತಂಡಗಳ ನಡುವೆ ಐಪಿಎಲ್ ಪಂದ್ಯ ನಡೆದಿದ್ದರಿಂದಾಗಿ ಸಾರ್ವಜನಿಕರ ಸುಗಮ ಸಂಚಾರದ ದೃಷ್ಟಿಯಿಂದ ಮೈದಾನದ ಸುತ್ತಮುತ್ತ ಸಂಚಾರ ವ್ಯವಸ್ಥೆಯಲ್ಲಿ ಕೆಲ ಮಾರ್ಪಾಡುಗಳನ್ನು ಮಾಡಲಾಗಿತ್ತು.

## 45.3 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲು ಬಿಸಿಲಿನ ಹೊಡೆತಕ್ಕೆ 6 ಮಂದಿ ಬಲಿ

ಮುನ್ನೆಚ್ಚರಿಕೆ: ಮಧ್ಯಾಹ್ನದ ಬಿಸಿಲಿನ ಸಮಯದಲ್ಲಿ ಹೊರಗೆ ಹೋಗುವುದನ್ನು ತಪ್ಪಿಸಬೇಕು. ಕೆಲಸಗಳನ್ನು ಬೆಳಗ್ಗೆ ಅಥವಾ ಸಂಜೆ ಪೂರ್ಣಗೊಳಿಸಬೇಕು. ಬಿಸಿ ಗಾಳಿ ಯಿಂದ ತಪ್ಪಿಸಲು ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು. ಹೊರಗೆ ಹೋಗುವ ಅಗತ್ಯವಿದ್ದರೆ ಛತ್ರಿ, ಟೋಪಿ ಅಥವಾ ತಲೆಯನ್ನು ಮುಚ್ಚಿಕೊಳ್ಳಲು ಕರವಸ್ತ್ರವನ್ನು ಬಳಸಬೇಕು. ಸಾಕಷ್ಟು ನೀರು ಮತ್ತು ಮಜ್ಜಿಗೆ ಕುಡಿಯುವುದು ಅತ್ಯಗತ್ಯ.

ಹೀಟ್ ವೇವ್ ಇನ್ನೊಂದು ವಾರ ಮುಂದುವರಿಯಲಿದೆ: ಪ್ರತಿ ವರ್ಷ ಮೇ ತಿಂಗಳಲ್ಲಿ ಗರಿಷ್ಠ ತಾಪಮಾನ ದಾಖಲಾಗುವುದು ಸಹಜವಾದರೂ, ಈ ವರ್ಷ ಎಪ್ರಿಲ್‌ನಲ್ಲಿಯೇ ತಾಪಮಾನವು 40 ಡಿಗ್ರಿ ಗಡಿಯನ್ನು ದಾಟಿದೆ. ಕೃಷಿ ಸಂಶೋಧನಾ ಕೇಂದ್ರದ ವಿಜ್ಞಾನಿ ಮೋಹನ್ ದಾಸ್, ಉತ್ತರ ಮತ್ತು ವಾಯುವ್ಯ ದಿಕ್ಕುಗಳಿಂದ ಬೀಸುತ್ತಿರುವ ಬಿಸಿ ಗಾಳಿಯಿಂದಾಗಿ ಶಾಖದ ತೀವ್ರತೆ ಹೆಚ್ಚುತ್ತಿದೆ. ಇದು ಹೀಟ್ ವೇವ್ ಆಗಲಿದೆ ಎಂದು ಹೇಳಿದ್ದಾರೆ. ಇದರಿಂದ ಕಟ್ಟಡದ ಗೋಡೆಗಳು ಬಿಸಿಯಾಗುತ್ತಿವೆ ಮತ್ತು ಓವರ್‌ಹೆಡ್ ಟ್ಯಾಂಕ್‌ಗಳಲ್ಲಿನ ನೀರು ತಡರಾತ್ರಿಯವರೆಗೂ ಬಿಸಿಯಾಗಿರುತ್ತದೆ. ಫ್ಯಾನ್‌ಗಳು ಓಡುತ್ತಿದ್ದರೂ ಸಹ, ಗಾಳಿಯು ಬಿಸಿಯಾಗಿರುತ್ತದೆ.

**ಆದಿಲಾಬಾದ್ ಜಂಟಿ ಜಿಲ್ಲೆಗೆ ರೆಡ್ ಅಲರ್ಟ್:** ಹಲವಾರು ವರ್ಷಗಳಿಂದ ಜಿಲ್ಲೆಯಲ್ಲಿ ಅತ್ಯಂತ ಹೆಚ್ಚಿನ ತಾಪಮಾನ ದಾಖಲಾಗುತ್ತಿದೆ. ಎಪ್ರಿಲ್ ತಿಂಗಳ ಸರಾಸರಿ ತಾಪಮಾನ 40 ಡಿಗ್ರಿ ಇದ್ದರೂ, ಭಾನುವಾರ 44 ಡಿಗ್ರಿಗಿಂತ ಹೆಚ್ಚಾಗಿದೆ. ನರಸಾಪುರ, ಜನ್ನಾಕಪುರ, ದಸ್ತೂರಾಬಾದ್, ಬೇಲಾ, ಕುಂದರಂ, ಜೈನಾಥ್, ಭೈನ್ಸಾ, ಮಂಚೇರಿಯಲ್, ಕೆರಮೇರಿ, ಪೆಂಬಿ ಮತ್ತು ತನೂರ್ ಪ್ರದೇಶಗಳಲ್ಲಿ ತಾಪಮಾನ 44 ಡಿಗ್ರಿ ಸೆಲ್ಸಿಯಸ್ ಮೀರಿದೆ. ತಾಪಮಾನ 45 ಡಿಗ್ರಿ ತಲುಪಿದರೆ ರೆಡ್ ಅಲರ್ಟ್ ಘೋಷಿಸಲಾಗುವುದು ಎಂದು ಹವಾಮಾನ ಇಲಾಖೆ ತಿಳಿಸಿದೆ.

## ಗೋವಂಶಕ್ಕೆ ರಾಷ್ಟ್ರ ಮಟ್ಟದ ಸ್ಥಾನಮಾನ ನೀಡಲು ಮನವಿ

ಗೋ ಸಂರಕ್ಷಣೆಗೆ ರಾಷ್ಟ್ರ ಮಟ್ಟದಲ್ಲಿ ಕ್ರಮ ಕೈಗೊಳ್ಳಬೇಕು, ಅಪಘಾತಗಳು, ಕಳ್ಳಸಾಗಣೆ ಮತ್ತು ಹತ್ಯೆಗಳ ಪರಿಣಾಮವಾಗಿ ದೇಶೀಯ ಗೋವಂಶದ ಸಂಖ್ಯೆ ಕುಸಿಯುತ್ತಿದೆ. ಗ್ರಾಮೀಣ ಜೀವನದ ಅವಿಭಾಜ್ಯ ಅಂಗವಾಗಿರುವ ಸ್ಥಳೀಯ ಜಾನುವಾರುಗಳು ಇನ್ನೂ ದುಸ್ಥಿತಿಯಲ್ಲಿ ಬದುಕುತ್ತಿದೆ. ಸಂವಿಧಾನದ ವಿಧಿ 48 ಅನ್ವಯ ರಾಜ್ಯವು ಕೃಷಿ ಮತ್ತು ಪಶುಸಂಗೋಪನೆ ಯನ್ನು ವೈಜ್ಞಾನಿಕವಾಗಿ ಅಭಿವೃದ್ಧಿಪಡಿಸಿ, ಹಸುಗಳ ಸಂರಕ್ಷಣೆಗೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಠಾಕೂರ್ ವಿನಯ ಸಿಂಗ್, ಶರಣಬಸವ, ಸೋನಾ ದೀಕ್ಷಿತ್, ಪತಶುರಾಮ್, ಕೃಷ್ಣ, ಡಿ.ಧರ್ಮತೇಜ್, ಸ್ವರ್ಣಾಸಿಂಗ್ ಸೇರಿದಂತೆ ಅನೇಕರು ಇದ್ದರು.

## ಭೀಕರ ರಸ್ತೆ ಅಪಘಾತ: ಇಬ್ಬರು ಸಾವು, ಇಬ್ಬರಿಗೆ ಗಂಭೀರ ಗಾಯ

ಇನ್ನೂ ಅಪಘಾತದಲ್ಲಿ ಗಾಯಗೊಂಡಿರುವ 19 ವರ್ಷದ ಶ್ವೇತಾ ಅವರ ಕಾಲು ಕಟ್ ಹೋಗಿದ್ದು, 22 ವರ್ಷದ ಲಕ್ಷ್ಮಿ ಅವರಿಗೆ ಗಂಭೀರ ಗಾಯಗಳಾಗಿವೆ. ಗಾಯಾಳುಗಳನ್ನು ರಾಯಚೂರು ರಿಮ್ಸ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಘಟನೆಗೆ ಸಂಬಂಧಿಸಿದಂತೆ ಸಿರವಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮುಂದಿನ ತನಿಖೆ ನಡೆಯುತ್ತಿದೆ.

# ಗೋಹತ್ಯೆ ನಿಷೇಧ ಕಟ್ಟುನಿಟ್ಟಾಗಿ ಜಾರಿಗೆ ಒತ್ತಾಯಿಸಿ ಮನವಿ





**ಬಳ್ಳಾರಿ,** ಗೋಹತ್ಯೆ ನಿಷೇಧವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು ಹಾಗೂ ಗೋವಿನ ರಕ್ಷಣೆಗೆ ಸರ್ಕಾರಗಳು ತುರ್ತು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಹಿಂದುಪರ ಸಂಘಟನೆಗಳ ಒಕ್ಕೂಟದ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳ ಕಚೇರಿವರೆಗೆ ಪಾದಯಾತ್ರೆ ನಡೆಸಲಾಯಿತು.

ಹಿಂದೂ ಧರ್ಮದಲ್ಲಿ ಹಸುವನ್ನು ದೇವರ ಸ್ವರೂಪವಾಗಿ ಕಾಣಲಾಗುತ್ತದೆ. ಆದರೆ ವಿವಿಧೆಡೆ ಗೋಹತ್ಯೆ ನಡೆಯುತ್ತಿರುವುದು ಆತಂಕಕಾರಿ ಬೆಳವಣಿಗೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ಗೋಮಾತೆಯ ರಕ್ಷಣೆಗೆ ವಿಶೇಷ ಕಾನೂನುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಜೊತೆಗೆ ಅಕ್ರಮ ಗೋ ಸಾಗಣೆ ಹಾಗೂ ವಧೆ ತಡೆಯಲು ಸರ್ಕಾರಗಳು ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ನಗರದ ಪ್ರಮುಖ ವೃತ್ತದಲ್ಲಿ ಸೇರಿದ್ದ ಹಿಂದುಪರ ಸಂಘಟನೆಗಳ ಕಾರ್ಯಕರ್ತರು ಘೋಷಣೆಗಳನ್ನು ಕೂಗಿ ಪ್ರತಿಭಟನೆ ನಡೆಸಿದರು. ಬಳಿಕ ಜಿಲ್ಲಾಧಿಕಾರಿಗಳ ಕಚೇರಿವರೆಗೆ ಪಾದಯಾತ್ರೆ ನಡೆಸಿ ತಹಶೀಲ್ದಾರರ ಮೂಲಕ ಮುಖ್ಯಮಂತ್ರಿ ಹಾಗೂ ಪ್ರಧಾನಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಮಾತನಾಡಿದ ಮಾಜಿ ಶಾಸಕ ಗಾಲಿ ಸೋಮಶೇಖರ ರೆಡ್ಡಿ, ಗೋ ಸಂರಕ್ಷಣೆ ಕೇವಲ ಧಾರ್ಮಿಕ ಭಾವನೆಗೆ ಸೀಮಿತವಲ್ಲ, ಅದು ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯ ರಕ್ಷಣೆಯ ವಿಷಯವಾಗಿದೆ ಎಂದರು. ಗೋಹತ್ಯೆ ತಡೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಗಂಭೀರ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್ ನಾಯ್ಡು ಮಾತನಾಡಿ, ಗೋಶಾಲೆಗಳಿಗೆ ಹೆಚ್ಚಿನ ಸೌಲಭ್ಯ, ಅನುದಾನ ಒದಗಿಸಬೇಕು. ಗೋ ರಕ್ಷಣೆಗೆ ವಿಶೇಷ ಕಾರ್ಯಪಡೆ ರಚಿಸಿ ಅಕ್ರಮ ಚಟುವಟಿಕೆಗಳನ್ನು ತಡೆಯಬೇಕು ಎಂದು ಒತ್ತಾಯಿಸಿದರು.ಮನವಿಯಲ್ಲಿ ಗೋಹತ್ಯೆ ನಿಷೇಧ ಕಾಯ್ದೆಗಳನ್ನು ಕಠಿಣವಾಗಿ ಜಾರಿಗೆ ತರಬೇಕು, ಅಕ್ರಮ ಗೋ ಸಾಗಣೆ ತಡೆಯಬೇಕು, ಗೋಶಾಲೆಗಳಿಗೆ ನೆರವು ಹೆಚ್ಚಿಸಬೇಕು ಹಾಗೂ ಗೋ ರಕ್ಷಣೆಗೆ ವಿಶೇಷ ಯೋಜನೆ ರೂಪಿಸಬೇಕು ಎಂದು ಆಗ್ರಹಿಸಲಾಗಿದೆ. ಪ್ರತಿಭಟನೆಯಲ್ಲಿ ಹಿಂದುಪರ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು.

### ಬೆಲ್ಲದ ಬಾಗೇವಾಡಿಯಲ್ಲಿ ಅಂತರಾಜ್ಯ ಮಟ್ಟದ ಮಹಿಳಾ ಕಬಡ್ಡಿ ಸಂಭ್ರಮ

# ದಿ. ವಿಶ್ವನಾಥ ಮ. ಕತ್ತಿ ಅವರ ಸ್ಮರಣಾರ್ಥ ಕ್ರೀಡಾಕೂಟಕ್ಕೆ ಚಾಲನೆ



**ಹುಕ್ಕೇರಿ (ಬೆಳಗಾವಿ),** ದಿನಾಂಕ: ಏಪ್ರಿಲ್ 25 ಮತ್ತು 26, 2026. ಕ್ರೀಡಾ ಪ್ರೇಮಿಗಳ ನಾಡಾದ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಬೆಲ್ಲದ ಬಾಗೇವಾಡಿ ಗ್ರಾಮದಲ್ಲಿ ಕ್ರೀಡಾ ಸಂಭ್ರಮ ಮನೆಮಾಡಿದೆ. ದಿ. ವಿಶ್ವನಾಥ ಮ. ಕತ್ತಿ ಅವರ ಸ್ಮರಣಾರ್ಥ, ಪ್ರಪ್ರಥಮ ಬಾರಿಗೆ ಅಂತರಾಜ್ಯ ಮಟ್ಟದ ಮಹಿಳಾ ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿಗಳಿಗೆ ಅದ್ಧೂರಿ ಚಾಲನೆ ನೀಡಲಾಗಿದೆ.

ಕರ್ನಾಟಕ ರಾಜ್ಯ ಅಮೆಚೂರ್ ಕಬಡ್ಡಿ ಅಸೋಸಿಯೇಷನ್ ಹಾಗೂ ಬೆಳಗಾವಿ ಜಿಲ್ಲಾ ಅಮೆಚೂರ್ ಕಬಡ್ಡಿ ಅಸೋಸಿಯೇಷನ್‌ನ ಅನುಮತಿಯೊಂದಿಗೆ, ರಾಹುಲ್ ಕತ್ತಿ ಸ್ಪೋರ್ಟ್ಸ್ ಮತ್ತು ಸೋಷಿಯಲ್ ಕ್ಲಬ್‌ನ ಸಂಯುಕ್ತ ಆಶ್ರಯದಲ್ಲಿ ಈ ಪ್ರತಿಷ್ಠಿತ ಟೂರ್ನಿಯನ್ನು ಆಯೋಜಿಸಲಾಗಿದೆ.

ಅಂತರಾಜ್ಯ ಮಟ್ಟದ ಕ್ರೀಡಾಪಟುಗಳು ಭಾಗವಹಿಸುತ್ತಿರುವ ಈ ಪಂದ್ಯಾವಳಿಯು ಹೊನಲು ಬೆಳಕಿನ ವ್ಯವಸ್ಥೆಯಲ್ಲಿ ನಡೆಯುತ್ತಿದ್ದು, ಕಬಡ್ಡಿ ಆಟಗಾರರಿಗೆ ತಮ್ಮ ಕೌಶಲ ಪ್ರದರ್ಶಿಸಲು ಉತ್ತಮ ವೇದಿಕೆಯನ್ನು ಕಲ್ಪಿಸಿಕೊಟ್ಟಿದೆ. ಇದೇ ಸಂದರ್ಭದಲ್ಲಿ ಶಾಸಕರು ನಿಖಿಲ್ ಕತ್ತಿ .ಓಉಆ ಅಧ್ಯಕ್ಷರು ಮಹಾವೀರ್ ನಿಲಜಗಿ. ಎಲ್ಲ ನಿರ್ದೇಶಕರು ಉದ್ಯಮಿ ಪವನ್ ಕತ್ತಿ . ಹಲವಾರು ಗಣ್ಯರು ಸೇರಿ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು. ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿಯನ್ನು ನೋಡಲು ಜನಸಾಗರವೇ ಹರಿದು ಬಂದಿತ್ತು. ಎಲ್ಲ ರಾಜ್ಯದ ಕಬ್ಬಡ್ಡಿಯ ತಂಡಗಳು ಅತ್ಯುತ್ತಮ ಪ್ರದರ್ಶನ ನೀಡಿ ಜನರ ಮನಸನ್ನ ಗೆಲ್ಲುವಲ್ಲಿ ಯಶಸ್ವಿಯಾದರು. ನಿಖಿಲ್ ಕತ್ತಿ ಮಾಧ್ಯಮದೊಂದಿಗೆ ಮಾತನಾಡಿ ನಮ್ಮ ಗ್ರಾಮೀಣ ಕ್ರೀಡೆಗಳು ಕ್ರೀಡಾಪಟುಗಳು. ರಾಜ್ಯ ರಾಷ್ಟ್ರ ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಳೆಯಬೇಕು ಎಂಬುದೇ ನಮ್ಮೆಲ್ಲರ ಕಾಯಕವಾಗಿದೆ ಎಂದು ಹೇಳಿದರು . ಉತ್ತರ ಕರ್ನಾಟಕದಲ್ಲಿ ಸಾಕಷ್ಟು ಕ್ರೀಡೆಗಳಲ್ಲಿ ಭಾಗವಹಿಸಿ ನಮ್ಮ ಜಿಲ್ಲೆ ರಾಜ್ಯದ ಹೆಸರನ್ನು ಮುಂಚಿನಿಯಲ್ಲಿ ತಂದ ಕ್ರೀಡಾಪಟುಗಳು ಇದ್ದಾರೆ.

ಅವರಿಗೆ ನಮ್ಮ ಪ್ರೋತ್ಸಾಹ ನಿರಂತರವಾಗಿ ರಬೇಕು ಎಂದರು. ಇಂಥ ಕ್ರೀಡಾ ವೇದಿಕೆಗಳನ್ನ ನಾವು ನೀವೆಲ್ಲರೂ ಹಮ್ಮಿಕೊಂಡು ನಮ್ಮ ಕ್ರೀಡಾಪಟುಗಳನ್ನು ಬೆಳೆಸಬೇಕೆಂದು ಹೇಳಿದರು.

# ಫಲಿತಾಂಶ ಹೆಚ್ಚಳಕ್ಕೆ ಮುಂದೆಯೂ ನಿರಂತರವಾಗಿ ಶ್ರಮಿಸಿ-ಡಿಸಿ ನಿತೀಶ

ಹಾಕಿಕೊಳ್ಳಬೇಕಾಗಿದೆ. ಅದಕ್ಕಾಗಿ ಪ್ರತಿಯೊಬ್ಬ ವಿದ್ಯಾರ್ಥಿಗೆ ಶೈಕ್ಷಣಿಕ ಪ್ರೋತ್ಸಾಹ ನೀಡುವುದು ಅತ್ಯಗತ್ಯವಾಗಿದೆ. ಬೇರೆ ಜಿಲ್ಲೆಗಳಿಗೆ ಹೋಲಿಸಿದರೇ ನಮ್ಮಲ್ಲಿ ಶಿಕ್ಷಕರ ಕೊರತೆ ಇದ್ದು, ಈ ಸವಾಲಿನ ಮಧ್ಯೆಯೂ ಈ ಬಾರಿ ಶೈಕ್ಷಣಿಕ ಪ್ರಗತಿಯನ್ನು ಉತ್ತಮವಾಗಿ ಸಾಧಿಸಿದ್ದೇವೆ. ಇದೇ ರೀತಿ ನಿರಂತರವಾಗಿ ಶೈಕ್ಷಣಿಕ ಪ್ರಗತಿ ಹೆಚ್ಚಳಕ್ಕೆ ಎಲ್ಲಾ ಅಧಿಕಾರಿಗಳು ಶ್ರಮಿಸಬೇಕು ಎಂದು ತಿಳಿಸಿದರು.

ಎಸ್‌ಎಸ್‌ಎಲ್‌ಸಿ ಎಂದರೇ ಕೇವಲ ಪ್ರೌಢ ಶಿಕ್ಷಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ. ಇದು ಮುಂದಿನ ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ಸಹಕಾರಿಯಾಗುತ್ತದೆ. ಎಸ್‌ಎಸ್‌ಎಲ್‌ಸಿಯಲ್ಲಿ ವಿದ್ಯಾರ್ಥಿಗಳು ಕಷ್ಟ ಪಟ್ಟು ಅಭ್ಯಾಸ ಮಾಡಿದರೆ ಮುಂದಿನ ಭವಿಷ್ಯ ಉತ್ತಮವಾಗಿರುತ್ತದೆ ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗೆ ಶತೃವೆಂದರೇ ಅದು ಮೊಬೈಲ್ ಫೋನ್ ಆಗಿದ್ದು, ಅದನ್ನು ಒಳ್ಳೆ ಕೆಲಸಗಳಿಗೆ ಮತ್ತು ಶಿಕ್ಷಣದ ವಿಚಾರವಾಗಿ ಬಳಸಿದರೇ ಮಾತ್ರ ಉಪಯೋಗವಾಗುತ್ತದೆ. ಕೇವಲ ಸಾಮಾಜಿಕ ಜಾಲತಾಣದಲ್ಲಿ ಕಾಲಕಳೆಯುವುದರಿಂದ ಸಮಯವೂ ವ್ಯರ್ಥವಾಗುತ್ತದೆ ಎಂದರು. ವಿದ್ಯಾರ್ಥಿಗಳ ಪಾಲಕರ ಪರಿಶ್ರಮಕ್ಕೆ ಪ್ರತಿಫಲವೆಂದರೇ ಅದು ವಿದ್ಯಾರ್ಥಿ ಉತ್ತಮ ಫಲಿತಾಂಶವನ್ನು ತೆಗೆವುದು ಮಾತ್ರ ಆಗಿರುತ್ತದೆ. ಶಿಕ್ಷಣ ಇಲಾಖೆ ಈ ಬಾರಿ ಉತ್ತಮವಾಗಿ ಕಾರ್ಯ ನಿರ್ವಹಿಸಿದ್ದು, ಇದೀಗ ಶಿಕ್ಷಣ ಇಲಾಖೆಯ ಜವಾಬ್ದಾರಿ ಇನ್ನೂ ಹೆಚ್ಚಾಗಿದ್ದು, ನಿರಂತರ ಶ್ರಮದಿಂದ ಕಾರ್ಯ ನಿರ್ವಹಿಸುವ ಮೂಲಕ ರಾಜ್ಯದಲ್ಲಿ ಇನ್ನೂ ಉನ್ನತ ಸ್ಥಾನಕ್ಕೆ ತಲುಪಬಹುದು, ಮುಂದಿನ ದಿನಗಳಲ್ಲಿ ಇದೇ ರೀತಿ ಶ್ರಮ ವಹಿಸಿ ಕೆಲಸ ಮಾಡಿದರೇ ಮೊದಲನೇ ಸ್ಥಾನಕ್ಕೆ ಬರುವುದರಲ್ಲಿ ಸಂದೇಹವೇ ಇಲ್ಲ ಎಂದು ಹೇಳಿದರು.

ವಿದ್ಯಾರ್ಥಿಗಳಿಗೆ ಸನ್ಮಾನ: ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಮಾನ್ವಿ ತಾಲೂಕಿನ ಸುಖದೇವ(625), ಸಿಂಧನೂರಿನ ನಿಖಿಲ್ ಮೇಟಿ(622), ಲಿಂಗಸುಗೂರಿನ ಪ್ರವೀಣ್(622), ದೇವದುರ್ಗದ ಮಲ್ಲಿಕಾರ್ಜುನ ಸ್ವಾಮಿ(622) ಹಾಗೂ ರಾಯಚೂರಿನ ಸೌಮ್ಯ ಪ್ಯಾಟಿ(619) ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಕೆ.ಡಿ.ಬಡಿಗೇರ, ಅಭಿವೃದ್ಧಿ ವಿಭಾಗದ ಉಪನಿರ್ದೇಶಕ ಚಂದ್ರಶೇಖರ ಭಂಡಾರಿ, ವಿವಿಧ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಉಪಸ್ಥಿತರಿದ್ದರು.

## ಶಿಕ್ಷಕರ ನೇಮಕಾತಿಯನ್ನು ನಾಲ್ಕೈದು ತಿಂಗಳಲ್ಲಿ ಮುಕ್ತಾಯ ಮಾಡಲಾಗುವುದು-ಮಧು ಬಂಗಾರಪ್ಪ

ಘೋಷಣೆ ಆಗಿರುವುದರಿಂದ ನೇಮಕಾತಿ ಹಾದಿ ಸುಗಮವಾಗಿದೆಟಿ ಎಂದು ಹೇಳಿದರು.

ನನಗೆ ಮೊದಲನೇ ವರ್ಷ ಇಲಾಖೆ ಬಗ್ಗೆ ತಿಳಿದುಕೊಳ್ಳಲು ಕಷ್ಟಕರವಾಗಿತ್ತು. ಫಲಿತಾಂಶದ ಬಗ್ಗೆ ಮಾತನಾಡುವವರು ಅವರ ಬಗ್ಗೆಯೇ ಅವರು ಟೀಕೆ ಮಾಡಿಕೊಂಡಂತೆಟಿ ಎಂದರು. ಹೆಚ್. ವಿಶ್ವನಾಥ್‌ಗೆ ವಯಸ್ಸಾಗಿದೆ ಅವರನ್ನು ಕ್ಷಮಿಸೋಣ : ಹೆಚ್. ವಿಶ್ವನಾಥ್ ಅವರು ಫಲಿತಾಂಶ ಹೆಚ್ಚಾಗಿರುವ ಬಗ್ಗೆ ಹೇಳಿಕೆ ನೀಡಿದ್ದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಹೆಚ್ ವಿಶ್ವನಾಥ್ ಅವರು ದೇಶದ ಭವಿಷ್ಯಕ್ಕೆ, ತಂದೆ ತಾಯಿಗೆ, ಅವರ ಶಿಕ್ಷಕರಿಗೆ ಮಾಡಿದ ಅವಮಾನವಾಗಿದೆ. ಅವರು ಕಾಪಿ ಹೊಡೆಯಿಸಿ ಪಾಸ್ ಮಾಡಿದ್ದರೆಂದು ಹೇಳಿದ್ದಾರೆ. ಆದರೆ ಹಿಂದೆ ಅಂಬಿ ನಿಂಗೆ ವಯಸ್ಸಾಯ್ತು ಎಂಬ ಫಿಲಂ ಮಾಡಿದ್ದರು. ಅದೇ ರೀತಿ ವಿಶ್ವನಾಥ್ ಅವರಿಗೆ ವಯಸ್ಸಾಗಿದೆ ಅಂತ ಹೇಳಬಹುದು. ಅವರ ಬಗ್ಗೆ ನಾನು ಹೆಚ್ಚು ಮಾತನಾಡುವುದಿಲ್ಲ ಎಂದು ಹೇಳಿದರು.

ವಿಶ್ವನಾಥ್ ಎಲ್ಲಿದ್ದಾರೆಂದು ಯಾರಿಗೂ ತಿಳಿಯುತ್ತಿಲ್ಲ್. ಅವರು ಯಾವ ಪಕ್ಷದಲ್ಲಿದ್ದಾರೆಂದು ತಿಳಿಯುತ್ತಿಲ್ಲ. ಮೈಸೂರು ಜಿಲ್ಲೆಗೆ ವಿಶ್ವನಾಥ್ ಅವಮಾನ ಮಾಡಿದ್ದಾರೆ. ಹೀನಾಯವಾಗಿ ಸೋತು, ಪುಕ್ಸಟ್ಟೆಯಾಗಿ ಪರಿಷತ್ ಸದಸ್ಯರಾಗಿದ್ದಾರೆ. ವಿಶ್ವನಾಥ್‌ಗೆ ವಯಸ್ಸಾಗಿದೆ. ಅವರನ್ನು ಕ್ಷಮಿಸಿ ಬಿಡೋಣ ಎಂದು ಹೇಳಿದರು.

ಅಂಬೇಡ್ಕರ್ ಅವರ ವಿಚಾರಧಾರೆಯನ್ನು ನಾನು ನನ್ನ ಇಲಾಖೆಯಲ್ಲಿ ಜಾರಿ ಮಾಡಿದ್ದೇನೆ. ಎಸ್ಸಿ/ ಎಸ್ಟಿ ಅವರು ಹೆಚ್ಚು ಪಾಸಾಗಿದ್ದಾರ್. ಅವರಿಗೆ ಇಲಾಖೆಯಲ್ಲಿ ನಮ್ಮ್ ಮನೆ ಮಕ್ಕಳಂತೆ ಪಾಠ ಹೇಳಿ ಕೊಟ್ಟಿದ್ದಾರೆ. ನಮ್ಮ ಇಲಾಖೆಯ ಮೇಲೆ ಟೀಕ್ ಮಾಡಿದಾಗ ನೋವಾಗುತ್ತದೆ. ಆದರೆ ಮಕ್ಕಳು ಪಾಸ್ ಆಗಿ ಅವರಿಗೆಲ್ಲ ತಕ್ಕ್ ಉತ್ತರ ನೀಡಿದ್ದಾರೆ ಎಂದರು. ಸಚಿವ ಪ್ರಿಯಾಂಕ್ ಖರ್ಗೆ ಕುರಿತು ಕೆಲವರು ಟೀಕೆ ಮಾಡಿದ್ದಾರೆ. ಅವರು ಅತಿ ಹೆಚ್ಚು ಅಭಿವೃದ್ಧಿ ಮಾಡಿದ್ದಾರೆ. ನಾವು ಚೋಟಾ ಸಹಿ ಮಾಡಿ ಯಾರನ್ನು ಜೈಲಿಗೆ ಕಳುಹಿಸಿಲ್ಲ. 29% ರಷ್ಟು ಯಾದಗಿರಿ, ಕಲಬುರಗಿ 28% ಮಕ್ಕಳು ಜಿಗಿತ ಕಂಡಿದ್ದಾರೆ. ಅಂದ್ರೆ ರಾಜ್ಯದಲ್ಲಿ ಎರಡನೇ ಸ್ಥಾನಕ್ಕೆ ಜಿಗಿತ ಕಂಡಿದ್ದಾರೆ. ಮಂಗಳೂರು– ಉಡುಪಿಯಲ್ಲಿ 3.3 % ರಷ್ಟು ಹೆಚ್ಚು ಅಂಕ್ ಪಡೆದುಕೊಂಡಿದ್ದಾರೆ. ಆದರೆ, ಇದು ಕಡಿಮೆ ಅಲ್ಲ ಎಂದು ಹೇಳಿದರು. ಸಂಸದ ಬಸವರಾಜ ಬೊಮ್ಮಾಯಿ ಅವರು ಸಹ ಮಾತನಾಡಿದ್ದಾರೆ. ಇವರು 35 ರಿಂದ 33 ಅಂಕ ನೀಡಿದ್ದರಿಂದ ಪಾಸ್ ಆಗಿದ್ದಾರೆ ಎಂದು ಹೇಳಿದ್ದಾರೆ. ನಾವು ವೆಬ್ ಕಾಸ್ಟ್ ಮೂಲಕ ಪರೀಕ್ಷೆ ನಡೆಸಿದ್ದೇವೆ. ವೆಬ್ ಕಾಸ್ಟಿಂಗ್ ಅನ್ನು ದೇಶದಲ್ಲಿಯೇ ನಾವೇ ಮೊದಲು ಮಾಡಿದ್ದೇವೆ. ಈಗ ನಮ್ಮ್ ವೆಬ್‌ಕಾಸ್ಟ್ ಅನ್ನು ದೆಹಲಿಯವರು ಕೇಳಿ ಪಡೆದುಕೊಂಡಿದ್ದಾರೆ. ಸಿಬಿಎಸ್‌ಸಿಯಲ್ಲೂ ಎರಡನೇ ಪರೀಕ್ಷೆಯನ್ನು ತಂದಿದ್ದಾರೆ. ನೀವು ನಿಮ್ಮ್ ಮಗನನ್ನು ಚುನಾವಣೆಯಲ್ಲಿ ಹೀನಾಯವಾಗಿ ಸೋಲಿಸಿದ್ದೀರಿ ಎಂದರು. 1,482 ಮಕ್ಕಳು ಮಾತ್ರ 35 ರಿಂದ 33ಕ್ಕೆ ಇಳಿಸಿದ್ದರಿಂದ ಪಾಸ್ ಆಗಿದ್ದಾರೆ ಅಷ್ಟೇ ಎಂದು ಬೊಮ್ಮಾಯಿ ಅವರಿಗೆ ಸಚಿವ ಮಧು ಬಂಗಾರಪ್ಪ ತಿರುಗೇಟು ನೀಡಿದರು.

ಡಿಡಿಪಿಐ ಹಾಗೂ ಬಿಇಓಗೆ ಶಬ್ಬಾಶ್ ಗಿರಿ : ತಂದೆ ಕಳೆದುಕೊಂಡ ವಿದ್ಯಾರ್ಥಿಗೆ ನೋವಿನಲ್ಲೂ ಅವರನ್ನು ಒಪ್ಪಿಸಿ, ಡಿಡಿಪಿಐ ಹಾಗೂ ಬಿಇಓ ಅವರು ಅವರ ಮನವೊಲಿಸಿ ಪರೀಕ್ಷೆ ಬರೆಯಿಸಿದ್ದಾರೆ. ಅವರಿಬ್ಬರಿಗೆ ಸೆಲ್ಯೂಟ್ ಮಾಡುತ್ತೇನೆ ಎಂದರು.

ಜನಿವಾರ ತೆಗೆಸಿದವರಿಗೆ ಕಠಿಣ ಶಿಕ್ಷೆ ಆಗಬೇಕು : ಜನಿವಾರ, ಹಿಜಾಬ್ ಬಗ್ಗೆ ಅವಮಾನ ಮಾಡುವುದು ಸರಿಯಲ್ಲ. ಇಂತಹ ಕೃತ್ಯ ಮಾಡಿದವರಿಗೆ ಕಠಿಣ ಶಿಕ್ಷೆ ಬಗ್ಗೆ ತಿಳಿಸಲಾಗುವುದು. ಈ ಕುರಿತು ಸಚಿವ ಸುಧಾಕರ್ ಅವರು ಪ್ರತಿಕ್ರಿಯಿಸಿದ್ದಾರೆ ಎಂದು ಹೇಳಿದರು. ಡಾ. ರಾಜ್ ಸಮಾಧಿ ಕುರಿತು ನಟ ಚೇತನ್ ಹೇಳಿಕೆಯ ಕುರಿತ ಶಿವಣ್ಣನ ಮಾತಿಗೆ ನಾನು ಬದ್ಧವಾಗಿದ್ದೇನೆ. ನಾನು ಬಾಯಿ ಮುಚ್ಚಿಕೊಂಡು ಇರುತ್ತೇನೆ. ಡಾ. ರಾಜ್ ಕುಮಾರ್ ಅಂದ್ರೆ ನಮಗೆಲ್ಲ ದೇವರಿದ್ದಂತೆ. ಇದರಿಂದ ಶಿವಣ್ಣ ಏನ್ ಹೇಳಿದ್ದರೂ ನಾನು ಅದಕ್ಕೆ ಸಹಮತ ವ್ಯಕ್ತಪಡಿಸುತ್ತೇನೆ ಎಂದರು.

ಮಳೆ ಹಾನಿ ವರದಿ ಪಡೆಯುವೆ : ನಿನ್ನೆ ಹೊಳೆಹೊನ್ನೂರು ಭಾಗದಲ್ಲಿ ಮಳೆಗೆ ಬಹಳ ಹಾನಿಯಾಗಿದೆ. ಇದರ ಬಗ್ಗೆ ಜಿಲ್ಲಾ ಪಂಚಾಯತ್ ಸಿಇಓ ಅವರಿಂದ ಮಾಹಿತಿ ಪಡೆದುಕೊಳ್ಳುತ್ತೇನೆ. ನನ್ನ್ ಕ್ಷೇತ್ರದಲ್ಲೂ ಸಹ ಮಳೆ ಗಾಳಿ ಬಹಳ್ ಹಾನಿ ಉಂಟು ಮಾಡಿತ್ತು.್ ಮನೆಗಳಿಗೆ ಹಾಕಿರುವ ತಗಡಿನ ಶೀಟುಗಳು ಹಾರಿ ಹೋಗಿ ಸಾಕಷ್ಟು ಹಾನಿ ಉಂಟು ಮಾಡುತ್ತಿದೆ. ಈಗ ತಹಶೀಲ್ದಾರ್, ಇಓಗಳಿಂದ ಮಾಹಿತಿ ಪಡೆದುಕೊಂಡು ಹಾನಿಯ ಪರಿಹಾರದ ಬಗ್ಗೆ ಚರ್ಚೆ ನಡೆಸಲಾಗುತ್ತದೆ ಎಂದು ತಿಳಿಸಿದರು.ದ್ವಿತೀಯ ಪಿಯುಸಿ ಹಾಗೂ ಎಸ್‌ಎಸ್‌ಎಲ್‌ಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದವರಿಗೆ ಸಚಿವರು ಸನ್ಮಾನ ಮಾಡಿದರು ಈ ವೇಳೆ ಜಿಲ್ಲೆಯಲ್ಲಿ ದ್ವಿತೀಯ ಪಿಯುಸಿ ಹಾಗೂ ಎಸ್‌ಎಸ್‌ಎಲ್‌ಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದವರಿಗೆ ಸಚಿವರು ಸನ್ಮಾನ ಮಾಡಿದರು. ಈ ವೇಳೆ ಕಾಂಗ್ರೆಸ್ ಮುಖಂಡರು ಹಾಜರಿದ್ದರು.

## ಕುರ್ಚಿ ಉಳಿಸಿಕೊಳ್ಳಲು ಸಿದ್ದರಾಮಯ್ಯರಿಂದ ಸ್ವಾರ್ಥ ರಾಜಕಾರಣ-ನರಸಪ್ಪ ದಂಡೋರ

ಸಿದ್ದರಾಮಯ್ಯ ಮೂಲತಃ ವಕೀಲರು ಎಂದು ಹೇಳುತ್ತಿದ್ದು, ಮಾದಿಗ ಸಮುದಾಯಕ್ಕೆ ನ್ಯಾಯಸಮ್ಮತ ಮೀಸಲಾತಿ ನೀಡದೇ ಜಾತಿ ಜಾತಿಗಳ ಮಧ್ಯೆ ಜಗಳ ಹಚ್ಚುವವರಾಗಿದ್ದಾರೆ. ಈಗಾಗಲೇ ದಾವಣಗೆರೆ, ಬಾಗಲಕೋಟೆ ಉಪಚುನಾವಣೆಗಳಾಗಿದ್ದು, ಅಲ್ಲಿ ಬಿಜೆಪಿ ಬಹುಮತದಿಂದ ಗೆಲುವು ಸಾಧಿಸುತ್ತದೆ. ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷವನ್ನು ಸೋಲಿಸುವುದೇ ಮಾದಿಗ ಸಮುದಾಯದ ಶಪಥವಾಗಿರುತ್ತದೆ. 2028ರ ಚುನಾವಣೆಯಲ್ಲಿ ಕಾಂಗ್ರೆಸ್ ಸೋಲಿಸಲಾಗುತ್ತದೆ ಎಂದು ಎಚ್ಚರಿಸಿದರು.

ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಸಂವಿಧಾನಾತ್ಮಕವಾಗಿ ಹಕ್ಕು ನೀಡದ ಸರ್ವೋಚ್ಚ ನ್ಯಾಯಲಯ ತೀರ್ಪನ್ನು ತಿರಸ್ಕರಿಸಿ ಬಲಾಢ್ಯ ಬಲಗೈ ಸಚಿವರ ಕೈಗೊಂಬೆಗಳಾಗಿ ಮಾದಿಗ ಮತ್ತು ಅಲೆಮಾರಿ ಸಮುದಾಯಗಳಿಗೆ ಒಳಮೀಸಲಾತಿಯಲ್ಲಿ ಬಹುದೊಡ್ಡ ಮೋಸ ಮಾಡಿ ಮಾದಿಗರನ್ನು ತುಳಿಯುವಂತ ಕೆಲಸ ಕಾಂಗ್ರೆಸ್ ಪಕ್ಷದ್ದಾಗಿದೆ ಎಂದರು. ಏ.24ರಂದು ವಿಶೇಷ ಸಚಿವ ಸಂಪುಟದಲ್ಲಿ ಮೂರು ವರದಿಗಳನ್ನು ಕಸದ ಬುಟ್ಟಿಗೆ ಎಸೆದು. ತಮ್ಮ ಸ್ವಾರ್ಥಕ್ಕಾಗಿ ಮತ್ತು ಸಮಾಜವನ್ನು ಬಲಿಕೊಟ್ಟಿರುವ ಕಾಂಗ್ರೆಸ್ ಸರಕಾರ ಸಾಮಾಜಿಕ ನ್ಯಾಯ ಕೊಡುವಲ್ಲಿ ಸಂಪೂರ್ಣ ವಿಫಲಗೊಂಡಿದೆ ಮತ್ತು ಒಳಮೀಸಲಾತಿಯನ್ನು ಕಾನೂನು ಕಾಯ್ದೆ ಅಡಿಯಲ್ಲಿ ಜಾರಿಗೆ ತರುವ ತಮ್ಮ ಪ್ರಣಾಳಿಕೆಯಲ್ಲಿ ಘೋಷಣೆಯಾಗಿರುತ್ತದೆ. ಆದರೆ ಒಳಮೀಸಲಾತಿಯಲ್ಲಿ ಪರಿಶಿಷ್ಟ ಜಾತಿಯ ಯಾವ ಸಮಾಜಕ್ಕೂ ಕೂಡ ನ್ಯಾಯ ಸಿಗದೆ 101 ಜಾತಿ ಜನಾಂಗಕ್ಕೆ ಕಣ್ಣಿಗೆ ಮಣ್ಣೆರೆಚುವ ಕೆಲಸ ಕಾಂಗ್ರೆಸ್ ಸರಕಾರ ಮಾಡಿರುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಚಿವ ಸಂಪುಟದಲ್ಲಿ ಕಾಟಾಚಾರಕ್ಕಾಗಿ ಒಳಮೀಸಲಾತಿಯನ್ನು ಶೇ.50 ಮೀಸಲಾತಿಯನ್ನು ಒಳಗೊಂಡು ಶೇ.15 ಮೀಸಲಾತಿಯನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಿ ಪ್ರವರ್ಗ (ಎ) 5.2.5 ಉಪಜಾತಿಗಳು 18 ಇರುತ್ತವೆ. ಮತ್ತು ಪ್ರವರ್ಗ (ಬಿ) 5.2.5 ಉಪಜಾತಿಗಳು 20 ಇರುತ್ತವೆ. ಪ್ರವರ್ಗ (ಸಿ) ಉಪಜಾತಿಗಳು 63 ಇರುತ್ತವೆ. ಇದರಲ್ಲಿ ಶೇ.15ರಷ್ಟು ಮೀಸಲಾತಿಗೆ ರೋಸ್ಟರ್ ಬಿಂದು ಪದ್ಧತಿಯನ್ನು ಅಳವಡಿಸಿಕೊಂಡಿರುವುದಿಲ್ಲ. ಪ್ರತ್ಯೇಕವಾಗಿ ಅಲೆಮಾರಿ ಸಮುದಾಯಗಳಿಗೆ ಶೇಕಡ 1% ಮೀಸಲಾತಿಯನ್ನು ನಿರ್ಧರಿಸಬೇಕಾಗಿತ್ತು. ಆದರೆ ಸಂವಿಧಾನದ ಆಶಯ ಅನುಗುಣವಾಗಿ ಅಸ್ಪೃಶ್ಯ ಸಮುದಾಯಗಳಿಗೆ ನ್ಯಾಯವನ್ನು ಕೊಡದೆ ನೊಂದ ಸಮುದಾಯಗಳಿಗೆ ಮಹಾಮೋಸ ಮತ್ತು ಮಹಾದ್ರೋಹವನ್ನು ಬಗೆದಿದೆ ಕಾಂಗ್ರೆಸ್ ಸರಕಾರ ನಮ್ಮ ಸಮುದಾಯಕ್ಕೆ ಮಾಡಿದ ಮೋಸವನ್ನು ಹಂತ ಹಂತವಾಗಿ ಖಂಡಿಸುತ್ತೇವೆಂದು ಹೇಳಿದರು. ಈ ಸಂದರ್ಭದಲ್ಲಿ ಪ್ರಮುಖರಾದ ದುಳ್ಳಯ್ಯ ಗುಂಜಳ್ಳಿ, ಜಕ್ರಪ್ಪ ಹಂಚಿನಾಳ, ಹನುಮಂತ ಜುಲಮಗೇರಾ, ಭೀಮೇಶ ತುಂಟಾಪೂರ, ಯಲ್ಲಪ್ಪ ಡಿ.ರಾಂಪೂರ, ಅನೀಲಕುಮಾರ ತಲಮಾರಿ ಸೇರಿದಂತೆ ಅನೇಕರಿದ್ದರು.

OWNER, PUBLISHER, PRINTER BY: SHYAM SUNDER L. PUBLISHED FROM: H: NO: 5-3-6, HANUMAN TALKIES ROAD, OPP VAIKUNTAM TEMPLE, NETAJI NAGAR, RAICHUR-584101, DIST: RAICHUR, KARNATAKA AND PRINTED AT: KANNADA MATHRUBHOOMI PRINTERS, SHOP NO: 5-3-6, HANUMAN TALKIES ROAD, OPP VAIKUNTAM TEMPLE, NETAJI NAGAR, RAICHUR-584101, DIST: RAICHUR, KARNATAKA, EDITOR BY: SHYAM SUNDER L